TEXT PROBLEM WITHIN THE BOOK ONLY

UNIVERSAL LIBRARY
OU_200813
UNIVERSAL LIBRARY

# ಕಿರಿಯ ಕಾಣಿಕೆ

ಕರ್ಣಾಟಕ ಸಂಘ
ಮಹಾರಾಜರವರ ಕಾಲೇಜು, ಮೈಸೂರು

ಸತ್ಯಶೋಧನ ಪುಸ್ತಕ ಭಂಡಾರ
ಬೆಂಗಳೂರು ನಗರ

ಮೊದಲನೆಯ ಮುದ್ರಣ .. ೧೯೨೮
ಎರಡನೆಯ ಮುದ್ರಣ .. ೧೯೩೦

CHECKED 1956

ಜಿಟಿ.ಎ. ಮುದ್ರಣಾಲಯ
ಮೈಸೂರು

Checked 1965

*All Rights Reserved*

ಗುರುವೆ, ನೀವು ಕಲಿಸಿದೆರಡು
ಚರಣಗಳನೆ ಮರಳಿ ಹಾಡಿ,
ಕಿರಿಯ ಕಾಣಿಕೆಯನ್ನು ತಂದೆ-
ವಿದನು, ಸಲಿಸಲು.—
ಓರಿಯುರಾಡುವುದನೆ ಹಸುಳೆ
ತೊದಲಿ ನಲಿಯುವೆ !

# ಎರಡನೆಯ ಮುದ್ರಣದ ಪೀಠಿಕೆ

---

ಕಿರಿಯ ಕಾಣಿಕೆಯ ಮೊದಲನೆಯ ಮುದ್ರಣದ ಪ್ರತಿಗಳು ಮುಗಿದು ಹೋಗಿ ಎರಡನೆಯ ಮುದ್ರಣವನ್ನು ಮಾಡಿಸುವ ಸುಯೋಗವು ಇಷ್ಟುಬೇಗ ದೊರೆತದ್ದು ಸಂಘದವರಿಗೆ ಸಂತೋಷಪ್ರದವಾದ ವಿಷಯ. ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕವನ್ನು ಸಂಸ್ಥಾನದ ಎಲ್ಲ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ ಪುಸ್ತಕ ಭಂಡಾರ ಗಳಲ್ಲಿ ಇಡಬೇಕಾದದ್ದೆಂದು ಗೊತ್ತುಮಾಡಿರುವುದರಿಂದ ಈ ಎರಡನೆಯ ಮುದ್ರಣಕ್ಕೆ ವಿಶೇಷವಾಗಿ ಸಹಾಯವಾಯಿತು. ಹೀಗೆ ಪ್ರೋತ್ಸಾಹಿಸಿದ್ದಕ್ಕಾಗಿ ಸಂಘದವರು ವಿದ್ಯಾಭ್ಯಾಸದ ಇಲಾಖೆಯವರಿಗೆ, ಮುಖ್ಯವಾಗಿ ಡೈರೆಕ್ಟರಾದ ಶ್ರೀಮಾನ್ ಎ. ಎಸ್. ಸುಬ್ಬರಾಯರವರಿಗೆ ಚಿರ ಋಣಿಗಳಾಗಿರುತ್ತಾರೆ.

ಕರ್ಣಾಟಕಸಂಘ,
ಮಹಾರಾಜರವರ ಕಾಲೇಜು,
ಮೈಸೂರು.
ಪ್ರಮೋದ ಸಂ॥ ಜ್ಯೇಷ್ಠ ಶು॥ ೫
ಭಾನುವಾರ.

**ಟಿ. ಎಸ್. ವೆಂಕಣ್ಣಯ್ಯ,**
ಉಪಾಧ್ಯಕ್ಷ.

# ಮುನ್ನುಡಿ

ಶ್ರೀಮನ್ಮಹಾರಾಜರವರ ಕಾಲೇಜಿನ ಕರ್ಣಾಟಕಸಂಘದ ವಿದ್ಯಾರ್ಥಿಗಳು ಕೆಲವರು ರಚಿಸಿರತಕ್ಕ ಈ ಸಣ್ಣ ಕವನಗಳ ಪುಸ್ತಕವನ್ನು ಸಂಘದ ಸದಸ್ಯರುಗಳ ಪ್ರೋತ್ಸಾಹ ಮತ್ತು ಸಹಾಯುಗಳಿಂದ ಬಹು ಸಂತೋಷದಿಂದ ಪ್ರಕಟಿಸಲಾಗಿದೆ.

ಈ ಪುಸ್ತಕದಲ್ಲಿ ಸೇರಿಸಿರುವ ಕೆಲವು ಕವನಗಳು ಈ ಮೊದಲೇ ಪ್ರಕಟವಾಗಿದ್ದುವು. 'ಪ್ರತಿಭೆ','ಪಾರಿಜಾತ','ವಿಧವೆ','ಬಯಕೆ' ಎಂಬುವು '' ಪ್ರಬುದ್ಧಕರ್ಣಾಟಕ '' ದಲ್ಲಿಯೂ, 'ತಾಯಿ' 'ದೇವನ ಹರಿಕಾರರು' ಎಂಬುವು '' ಯೂನಿಯರ್‌ '' ಪತ್ರಿಕೆಯಲ್ಲಿಯೂ ಪ್ರಕಟಿತವಾಗಿದ್ದುವು. ಅವನ್ನು ಈ ಪುಸ್ತಕದಲ್ಲಿ ಸೇರಿಸಲು ಅನುಮತಿಯನ್ನು ಕೊಟ್ಟುದಕ್ಕಾಗಿ ಆ ಪತ್ರಿಕೆಗಳ ಸಂಪಾದಕರಿಗೆ ಸಂಘದವರು ಕೃತಜ್ಞರಾಗಿರುತ್ತಾರೆ.

ಈ ಕವನಗಳಲ್ಲಿ ' ಬೊಮ್ಮನಹಳ್ಳಿಯ ಕಿಂದರಿಜೋಗಿ ' ಎಂಬುದು ರಾಬರ್ಟ್‌ಬ್ರೌನಿಂಗ್ ಕವಿಯ ' The Pied Piper of Hamelin ' ಎಂಬ ಕವಿತೆಯ ಆಧಾರದ ಮೇಲೆ ರಚಿತವಾದದ್ದು. ವರ್ಡ್ಸ್‌ವರ್ತ್ ಕವಿಯ ' To the Small Celandine ' ಎಂಬ ಕವಿತೆಯ ಪ್ರಭಾವವನ್ನು ' ಪಾರಿಜಾತ 'ದಲ್ಲಿ ನೋಡಬಹುದು. ' ಆತ್ಮನಿವೇದನ 'ವು ಮಜುಂದಾರರ ಒಂದು ಚಿತ್ರದಿಂದ ಪ್ರೇರಿತವಾದದ್ದು. ' ದೇಶಭಕ್ತಿ ', 'ಹೋದ ಬಾಳ ಬೆಳಕು', 'ಮಲೆನಾಡ ಹುಡುಗಿ', 'ದೇವನ ಹರಿಕಾರರು' ಎಂಬ ಕವಿತೆಗಳು ಕ್ರಮವಾಗಿ ಸರ್ ವಾಲ್ಟರ್ ಸ್ಕಾಟಿನ ' Breathes there the man with soul so dead ', ಥಾಮಸ್ ಮೂರಿನ

'The Light of Other Days', ವರ್ಡ್ಸ್‌ವರ್ತಿನ 'The Solitary Reaper', ಮ್ಯಾಥ್ಯೂ ಆರ್ನಾಲ್ಡಿನ 'The Lord's Messengers' ಎಂಬ ಇಂಗ್ಲಿಷ್ ಕವನಗಳ ಪರಿವರ್ತನಗಳು. 'ದೇವನ ಹರಿಕಾರರು' ಎಂಬ ಹೆಸರಿನ ಎರಡು ಪರಿವರ್ತನಗಳಿವೆ. ಒಂದು ಹೊಸ ಛಂದಸ್ಸಿನಲ್ಲಿ ಬರೆದಿರುವುದು, ಇನ್ನೊಂದು ಷಟ್ಪದಿಯಲ್ಲಿ ಬರೆದಿರುವುದು. ಇವೆರಡಕ್ಕೂ ಯೂನಿಯನ್ನಿನವರು ಹಿಂದೆ ಬಹುಮಾನಕೊಟ್ಟು "ಯೂನಿಯನ್" ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಇಂಗ್ಲಿಷ್ ಭಾವಗಳನ್ನು ಕನ್ನಡಕ್ಕೆ ಇಳಿಸಲು ಯಾವ ತೆರದ ಛಂದಸ್ಸು ಹೆಚ್ಚು ಅನುಕೂಲವಾದದ್ದು ಎಂಬುದನ್ನು ಕುರಿತು ವಿಚಾರಮಾಡುವವರು ಈ ಕವನಗಳನ್ನು ಮೂಲದೊಂದಿಗೆ ಹೋಲಿಸಿ ನೋಡಬಹುದು. ಮೇಲೆ ಹೇಳಿದುವುಗಳಲ್ಲದೆ ಮಿಕ್ಕ ಕವನಗಳೆಲ್ಲವೂ ಸ್ವತಂತ್ರವಾದುವು.

ಈ ಕವನಗಳು ಒಟ್ಟಿನಲ್ಲಿ ಹೊಸದಾರಿಯವು. ಈ ಕವಿಗಳು ಕಾವ್ಯಕ್ಕೆ ಬೇಕಾದ ವಸ್ತುಗಳನ್ನು ಆರಿಸುವುದರಲ್ಲಿಯೂ ಪದ್ಯರಚನೆಯಲ್ಲಿಯೂ ಪ್ರಾಚೀನ ಸಂಪ್ರದಾಯಕ್ಕೆ ಕಟ್ಟುಬಿದ್ದಿಲ್ಲ. ಆದರೆ ಈ ಹೊಸದಾರಿಯನ್ನು ಇವರೇ ಕಲ್ಪಿಸಿಕೊಂಡಿಲ್ಲ. ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಡಿ. ವಿ. ಗುಂಡಪ್ಪನವರು, ಮಾಸ್ತಿ ವೆಂಕಟೇಶಯ್ಯಂಗಾರ್ಯರು ಮೊದಲಾದ ಹಿರಿಯರಿಗೆ ಈ ಹೊಸ ದಾರಿಯಲ್ಲಿ ನಡೆದು ಈ ಕವಿಗಳಿಗೆ ಮಾರ್ಗದರ್ಶಕರಾದ ಗೌರವವು ಸಲ್ಲುತ್ತದೆ. ಅವರುಗಳು, ಮುಖ್ಯವಾಗಿ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನೇ ಈ ಕವಿಗಳು ಅನುಸರಿಸಿರುತ್ತಾರೆ.

ಸಾಂಪ್ರದಾಯಿಕಕಾವ್ಯಗಳಲ್ಲಿ ಮಮತೆಯುಳ್ಳವರನೇಕರು ಈ ಹೊಸ ಕವನಗಳಲ್ಲಿನ ಸೌಂದರ್ಯವನ್ನೂ ಸ್ವಾರಸ್ಯವನ್ನೂ ಗ್ರಹಿಸಲಾರದವರಾಗಿ ಇವುಗಳು ಕಾವ್ಯಗಳೇ ಅಲ್ಲವೆನ್ನುವಷ್ಟು ದೂರ ಹೋಗುತ್ತಾರೆ.

ಈ ವಿಧವಾದ ಅಭಿಪ್ರಾಯಕ್ಕೆ ಅನಭ್ಯಾಸವೇ ಮುಖ್ಯಕಾರಣ. ಅಭ್ಯಾಸ ಮಾಡಿದರೆ, ಪ್ರಯತ್ನಪಟ್ಟರೆ ಅವರೂ ಈ ಕವನಗಳ ಸ್ವಾರಸ್ಯವನ್ನು ಗ್ರಹಿಸಬಹುದು. ಹಾಗೆ ಮಾಡುವುದರಿಂದ ಪ್ರಯೋಜನವುಂಟು. ''ಹೊಸ ದಾರಿಯಲ್ಲಿ ಹೋಗಕೂಡದು, ಪ್ರಾಚೀನಸಂಪ್ರದಾಯವನ್ನೇ ಅನುಸರಿಸಬೇಕು'' ಎಂದು ಈ ಕಾಲದ ಕವಿಗಳನ್ನು ನಿರ್ಬಂಧಪಡಿಸುವುದು ನ್ಯಾಯವಲ್ಲವೆಂದು ತೋರುತ್ತದೆ.

ಈ ಸಂದರ್ಭದಲ್ಲಿ ಹೊಸ ಕವನಗಳ ವಿಷಯವಾಗಿ ಒಂದೆರಡು ಮಾತು ಹೇಳಬಹುದು. ಹಿಂದಿನ ಕವಿಗಳು ಜೀವನದ ಕೆಲವು ಸಂಗತಿಗಳನ್ನು ಮಾತ್ರ ಕಾವ್ಯವಸ್ತುವನ್ನಾಗಿ ಇಟ್ಟುಕೊಳ್ಳುತ್ತಿದ್ದರು ಈಗಿನವರು ಜೀವನದ ಎಲ್ಲ ವಸ್ತುಗಳನ್ನೂ, ಅದರಲ್ಲಿಯೂ ಹಿಂದಿನವರು ತಾತ್ಸಾರ ಮಾಡಿ ಬಿಟ್ಟಿದ್ದ ಅಥವಾ ಅವರ ಕಣ್ಣಿಗೆ ಬೀಳದಿದ್ದ ಸಂಗತಿಗಳನ್ನು, ಕಾವ್ಯವಸ್ತುವನ್ನಾಗಿ ಆರಿಸಿಕೊಳ್ಳುತ್ತಾರೆ. ಜೀವನವು ವಿಸ್ತಾರವಾದದ್ದು, ಅಪಾರವಾದದ್ದು, ಕಾವ್ಯದೃಷ್ಟಿಯಿಂದ ನೋಡಬಲ್ಲವರಿಗೆ ಎತ್ತ ನೋಡಿದರತ್ತ ಕಾವ್ಯಕ್ಕೆ ತಕ್ಕ ವಸ್ತುವು ಕಣ್ಣಿಗೆ ಬೀಳಬಹುದು. ಹಾಳೂರು, ಚಟಾಕಿ, ನಾಯಿ, ಮಿಂಚುಹುಳು, ರಂಗವಲ್ಲಿ ಇಂತಹ ಎಷ್ಟೋ ಸಂಗತಿಗಳು ಕಾವ್ಯವಸ್ತುಗಳಾಗಬಹುದು; ಈಗ ಆಗಿವೆ. ಇಲ್ಲಿ ನಾವು ಗಮನಿಸಬೇಕಾದದ್ದು ಈ ತೆರದ ಸಂಗತಿಗಳಿಂದ ಕವಿಯ ಹೃದಯದಲ್ಲಿ ಹುಟ್ಟುವ ಭಾವಗಳು, 'ಆ ಭಾವಗಳು ಹೊಸವು, ಜನರು ತಿಳಿಯಬೇಕಾದುವು' ಎಂದು ಕವಿಗೆ ತೋರಿದಾಗ ಆತನು ಅವನ್ನು ವ್ಯಕ್ತಗೊಳಿಸಲು ಪ್ರಯತ್ನಿಸುತ್ತಾನೆ. ಈ ತೆರದ ಭಾವಗಳನ್ನು ವ್ಯಕ್ತಗೊಳಿಸಲು ಹಿಂದಿನ ಪದ್ಯರೂಪಗಳು ಸರಿಹೋಗುವುದಿಲ್ಲ ; ಈ ಹೊಸ ಭಾವಗಳಿಗೂ ಆ ಹಳೆಯ ಪದ್ಯರೂಪಗಳಿಗೂ ಹೊಂದಿಕೆಯಾಗುವುದಿಲ್ಲವೆಂದು ಕವಿಗೆ ತೋರಿದಾಗ ಹೊಸ ಪದ್ಯರೂಪಗಳನ್ನು ಕವಿಯು ಕಲ್ಪಿಸಿಕೊಳ್ಳುತ್ತಾನೆ.

ಹಳೆಯ ಪದ್ಯರೂಪಗಳು ಪರಿಚಿತವಾದುವು; ಅವುಗಳ ನಿಯಮವು ಗೊತ್ತಾದದ್ದು, ಸ್ಪಷ್ಟವಾದದ್ದು. ಹೊಸ ಪದ್ಯರೂಪಗಳು ಜನರಿಗೆ ಅಪರಿಚಿತವಾದುವು; ಅವುಗಳ ನಿಯಮವು ಗೊತ್ತಾಗದಿದ್ದದ್ದು, ಆದ ಕಾರಣವೇ ಅಸ್ಪಷ್ಟವಾದದ್ದು. ಪದ್ಯರಚನೆಯ ವಿಷಯದಲ್ಲಿ ಈಗಿನ ಕವಿಗಳು ಸ್ವಾತಂತ್ರ್ಯವನ್ನು ವಹಿಸಿದ್ದರೂ ಸ್ವೇಚ್ಛಾಚಾರಿಗಳಲ್ಲ; ಅವರೂ ಛಂದಶ್ಶಾಸ್ತ್ರದ ಮೂಲತತ್ವಗಳಿಗೆ ವಿರೋಧವಲ್ಲದ ಕೆಲವು ನಿಯಮ ಗಳನ್ನು ಇಟ್ಟುಕೊಂಡೇ ಪದ್ಯಗಳನ್ನು ರಚಿಸಿರುತ್ತಾರೆ. ಆದಕಾರಣ ಗೊತ್ತಾದ ರೂಪದಲ್ಲಿಲ್ಲವೆಂಬ ಮಾತ್ರದಿಂದ ಅವು ಪದ್ಯಗಳೇ ಅಲ್ಲವೆಂದು ಸಿದ್ಧಾಂತಮಾಡಿಬಿಡುವುದಕ್ಕೆ ಬದಲಾಗಿ ಸ್ವಲ್ಪ ವಿಚಾರಮಾಡಿ ನೋಡಿ ದರೆ ಅವುಗಳ ರಚನಾನಿಯಮವೂ ಸ್ಪಷ್ಟವಾಗಿ ಕಂಡುಬರುವುದು.

ಈ ಕವನಗಳನ್ನು ತಮಗೆ ಕಾಣಿಕೆಯಾಗಿ ಒಪ್ಪಿಸಲು ದಯವಿಟ್ಟು ಅನುಮತಿಯನ್ನಿತ್ತುದಕ್ಕಾಗಿ ಪೂಜ್ಯಗುರುಗಳೂ ಸಂಘದ ಅಧ್ಯಕ್ಷರೂ ಆದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಗೆ ಸಂಘದವರು ಚಿರ ಋಣಿಗಳಾಗಿರುತ್ತಾರೆ.

ಈ ಪುಸ್ತಕದ ಪ್ರಕಟನೆಗೆ ಸಂಘದ ಎಲ್ಲ ಸದಸ್ಯರ, ಮುಖ್ಯವಾಗಿ ಕಾರ್ಯಮಂಡಲಿಯವರ, ಉತ್ಸಾಹವು ಕಾರಣವಾದರೂ ಸಂಘದ ಕಾರ್ಯದರ್ಶಿಯವರಾದ ಶ್ರೀಮಾನ್ ವಿ. ವೆಂಕಟಾಚಾರ್ಯರ ಉತ್ಸಾಹವೂ ಉದ್ಯಮಶೀಲತೆಯೂ ಮುಖ್ಯಕಾರಣ. ಆದಕಾರಣ ಸಂಘದವರು ಅವರಿಗೆ ಕೃತಜ್ಞರಾಗಿರುತ್ತಾರೆ.

ಕರ್ಣಾಟಕ ಸಂಘ,
ಮಹಾರಾಜರವರ ಕಾಲೇಜು,
ಮೈಸೂರು,
ಪ್ರಭವ ಸಂವತ್ಸರದ ಫಾಲ್ಗುಣ ಶು॥ ೧.

**ಟಿ. ಎಸ್. ವೆಂಕಣ್ಣಯ್ಯ,**
ಉಪಾಧ್ಯಕ್ಷ.

## ವಿಷಯ ಸೂಚಿಕೆ

| ಕವನ | | ಪುಟ |
|---|---|---|
| ೧. | ಕನ್ನಡಿಗನ ಕೊರಗು .. .. | ೧ |
| ೨. | ಪೊದೆಯ ಹಕ್ಕಿ, ಎದೆಯ ಹಕ್ಕಿ .. | ೨ |
| ೩. | ಪ್ರತಿಭೆ .. .. .. | ೪ |
| ೪. | ಕೇಳಿಕೆ .. .. .. | ೭ |
| ೫. | ಕವಿತೆಗೆ .. .. .. | ೯ |
| ೬. | ಓರೆಯ ಹೂವು .. .. | ೧೧ |
| ೭. | ಪಾರಿಜಾತ .. .. .. | ೧೫ |
| ೮. | ಹಕ್ಕಿಗೆ .. .. .. | ೧೯ |
| ೯. | ಅರ್ಧಚಂದ್ರ .. .. .. | ೨೨ |
| ೧೦. | ಗುರು .. .. .. | ೨೩ |
| ೧೧. | ಚಟಾಕಿ .. .. .. | ೨೪ |
| ೧೨. | ಬೊಮ್ಮನಹಳ್ಳಿಯ ಕಿಂದರಿಜೋಗಿ .. | ೨೯ |
| ೧೩. | ತಾಯಿ .. .. .. | ೫೦ |
| ೧೪. | ದೇಶಭಕ್ತಿ .. .. .. | ೫೪ |
| ೧೫. | ದೋರಸಮುದ್ರ .. .. | ೫೫ |
| ೧೬. | ಹೋದ ಬಾಳ ಬೆಳಕು .. .. | ೫೬ |
| ೧೭. | ಚಿತ್ತಕ್ಷೋಭೆ .. .. .. | ೬೦ |
| ೧೮. | ದೂರು .. .. .. | ೬೪ |

| | ಕವನ | ಪುಟ |
|---|---|---|
| ೧೯. | ನನ್ನ ನಾಯಿ .. .. .. | ೬೮ |
| ೨೦. | ಜಂಕೆ .. .. .. | ೭೩ |
| ೨೧. | ವಿಧವೆ .. .. .. | ೭೪ |
| ೨೨. | ಅಕ್ಕ .. .. .. | ೭೫ |
| ೨೩. | ಬಯಕೆ .. .. .. | ೭೯ |
| ೨೪. | ತೊರೆ .. .. .. | ೮೧ |
| ೨೫. | ಮಲೆನಾಡ ಹುಡುಗಿ .. .. | ೮೫ |
| ೨೬. | ಎರಡು ದಾರಿ .. .. .. | ೮೭ |
| ೨೭ | ಬಿಡುಗಡೆ .. .. .. | ೮೯ |
| ೨೮. | ದೇವನ ಹರಿಕಾರರು (೧) .. .. | ೯೦ |
| | ,, (೨) .. .. | ೯೧ |
| ೨೯. | ಜೀವನ .. .. .. | ೯೩ |
| ೩೦. | ಆತ್ಮನಿವೇದನ .. .. .. | ೯೫ |

# ಕಿರಿಯ ಕಾಣಿಕೆ

## ಕನ್ನಡಿಗನ ಕೊರಗು

ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ,
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ !
ಮಿಕ್ಕವರು ಕಡೆಗಣಿಸಿ ನೂಕಿದಾಕಡೆ ಬಿದ್ದು,
ಯಾವ ಮಂಕೋ ಕವಿದು, ಹದುಗಿರುವೆವಲ್ಲ !
ರೊಕ್ಕ ಕೈಯೊಳಗಿಲ್ಲ, ಹುರುಡು ಮೈಯೊಳಗಿಲ್ಲ,
ಹೆಮ್ಮೆಯೊಂದನು ನೆಚ್ಚಿ ದೆಸೆಗೆಟ್ಟೆವಲ್ಲ !
ಅಕ್ಕತಂಗಿಯರೆಲ್ಲ ಮುಂದುಮುಂದಾಗಿರಲು
ನಮ್ಮ ತಾಯೊಬ್ಬಳೇ ನೊರಗಿರುವಳಲ್ಲ !
ಅಮ್ಮನನು ಕೈಬಿಡದೆ ಇನ್ನು ಮೆರೆಸುವೆವೆ ?
ಹಿರಿಯ ಹೆಸರನು ತಿರುಗಿ ಗಳಿಸಿಕೊಳ್ಳುವೆವೆ ?
ಸರಿಯವರ ತಲೆಮೆಟ್ಟಿ ಮುಂದೆ ನಿಲ್ಲುವೆವೆ ?
ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೆ ?

ತೀ. ನಂ. ಶ್ರೀಕಂಠಯ್ಯ.

## ಪೊದೆಯ ಹಕ್ಕಿ, ಎದೆಯ ಹಕ್ಕಿ

ಟುವ್ವಿ ! ಟುವ್ವಿ ! ಟುವ್ವಿ ! ಟುವ್ವಿ !
ಎಂದು ಹಕ್ಕಿ ಕೂಗಿತು.
ಅದರ ಹಾಡು ಬಂದು ಎನ್ನ
ಎದೆಯು ಗೂಡ ತಾಗಿತು !

ಟುವ್ವಿ ! ಟುವ್ವಿ ! ಟುವ್ವಿ ! ಟುವ್ವಿ !
ಎಂದು ಎನ್ನ ಎದೆಯೊಳೊಂದು
ಹಕ್ಕಿ ಕೂಗತೊಡಗಿತು !
ಆಗ ಎನ್ನ ಎದೆಯೊಳೊಂದು
ಹಕ್ಕಿ ಇರುವುದೆಂಬುದನ್ನು
ನಾನು ಗೊತ್ತುಹಿಡಿದೆನು !

ಟುವ್ವಿ ! ಟುವ್ವಿ ! ಟುವ್ವಿ ! ಟುವ್ವಿ !
ಎಂದು ಹಕ್ಕಿ ಹಾಡಿತು.
ಎದೆಯ ಹಕ್ಕಿ ಟುವ್ವಿ ! ಟುವ್ವಿ !
ಎನ್ನುತದನು ಕೂಡಿತು.

ಪೊದೆಯ ಮೇಲೆ ಇದ್ದ ಹಕ್ಕಿ
ಮೋಹಿಸೆದೆಯ ಹಕ್ಕಿಯ
ಟುವ್ವಿ ! ಟುವ್ವಿ ! ಟುವ್ವಿ ! ಟುವ್ವಿ !
ಎಂದು ಮತ್ತೆ ಹಾಡಿತು.

ಎದೆಯ ಹಕ್ಕಿ ಟುವ್ವಿ ಎಂದು
ಮತ್ತೆ ಅದನು ಕೂಡಿತು.
ಒಂದು ಬೇಡಿತೊಂದು ಕಾಡಿ-
ತೊಂದು ಸುಮ್ಮನಾಡಿತು !

ಪ್ರಶ್ನೆಯುತ್ತರಗಳನಾಲಿ-
ಸುತ್ತ ನಾನು ನಲಿದೆನು !
ಎದೆಯ ಹಕ್ಕಿಗಾಗಿ ಪೊದೆಯ
ಹಕ್ಕಿಯನ್ನು ಒಲಿದೆನು !

ಕೆ. ವಿ. ಪುಟ್ಟಪ್ಪ.

# ಪ್ರತಿಭೆ

ಕರಿಯ ಮುಗಿಲಿನಿದಿರಿನಲ್ಲಿ
ಮಿಂಚುಬಳ್ಳಿ ಹೊಳೆಯುವಂತೆ
ನನ್ನ ಮುಂದೆ ಸುಳಿವೆ, ರಮಣಿ,
ನೀನು ಯಾರೆಲೌ ?
ಕಣ್ಣುಮಿಟುಕಿಸುವುದರಲ್ಲೆ
ಮಿಂಚು ಥಟ್ಟನಳಿಯುವಂತೆ
ಒಂದೆ ನಿಮಿಷ ಕುಣಿದದೇಕೆ
ಮಾಯವಾಗುವೆ ?

ನೀನು ಜನಿಸುವೆಡೆಯದೆಲ್ಲಿ,
ನಿನ್ನ ನೆಲೆಯ ಮನೆಯದೆಲ್ಲಿ,
ನಿನ್ನನೊಲಿಸಿ ವಶಕೆ ತರುವ
ದಾರಿ ಯಾವುದು ?
ಇಳೆಯ ಮೋಹಗೊಳ್ಳುವಂತೆ
ಹೂವಿನೊಳಗೆ ಕಂಪನಿಡುವ
ದಿವ್ಯಶಕ್ತಿಯೊಂದು ಕಿಡಿಯೊ,
ನಿಜದ ದೇವಿಯೋ ?

ಕೋರಿ ಕವಿಯು ಕರೆದ ವೇಳೆ
ಬರುವಳಲ್ಲ, ತರುಣಿ, ನೀನು,
ಹುರುಪುಗುಂದಿ ಶ್ರಮವನೊಲ್ಲ-
ದಿರಲು ಸುಳಿಯುವೆ.

' ಬಾರೊ ' ಎನಲು ನಕ್ಕು ಓಡಿ,
ಬಳಲಿದಾಗ ಬೆನ್ನನೇರಿ
ಕುಣಿವ ಮಗುವಿನಂತೆ ನೀನ-
ದೇತಕಾಡುವೆ ?

ರಾಶಿಯಾಗಿ ಪದಗಳಿರಲಿ,
ನೆನೆದು ತಂದ ಭಾವವಿರಲಿ,
ಕುಳಿತು ಬರೆಯುತಿರಲಿ, ಕವಿಗೆ
ಚೆಲುವು ಹೊಳೆವುದೇ ?
ಕತ್ತಲಾದ ಕೋಣೆಯಲ್ಲಿ
ಚಿನ್ನವಿರಲಿ, ರನ್ನವಿರಲಿ,—
ಅಲ್ಲಿ ನೋಡುವವರಿಗದರ
ಹೊಳಪು ತಿಳಿವುದೇ ?

ದೇವಿ, ನೀನು ದಯವ ತೋರಿ
ಕವಿಯನೊಪ್ಪಿ ಬಂದರವನ
ಕವನದಲ್ಲಿ ಜೀವಕಳೆಯು
ಸೂಸಿ ಹರಿವುದು.
ಹೊನ್ನಿನೆರಕದಲ್ಲಿ ಸೇರಿ
ಮಣಿಯು ಹರಳು ತೊಳಗುವಂತೆ
ಮಾತಿನಲ್ಲಿ ಭಾವವೆಲ್ಲ
ಹೊಂದಿ ಮೆರೆವುದು.

ನನ್ನ ಕಣ್ಣುಗಳನು ಮುಸುಕಿ
ಮನಸು ಹಾರುವುದನು ತಡೆವ
ಮಂಜು ನಿನ್ನ ಮುಗುಳುನಗೆಯು
ಬೆಳಕಿಗೋಡಲಿ.
ನಿನ್ನ ಕರದ ಸೋಂಕಿನಿಂದ
ನನ್ನ ಹೃದಯವುಬ್ಬಿ ಬಿರಿದು
ಹೊಸವು ಭಾವಗಳನು ಕಂಡು
ಸುಖವ ಪಡೆಯುಲಿ.

ತೀ. ನಂ. ಶ್ರೀಕಂಠಯ್ಯ.

# ಕೇಳಿಕೆ

ಲತೆಯೆ, ಹೂಗಳ ತೋರು ;
ಸ್ಮಿತವನೆಲ್ಲೆಡೆ ಬೀರು ;
ಸುರಿಸು ನಲ್ಮೆಯ ಸೋನೆಯ.

ಅರಳು ಮಲ್ಲಿಗೆಮೊಗ್ಗೆ ;
ಅರಳಿಸೆನ್ನಯ ಮನವ,
ಬಿಗಿದ ಬಂಧವ ಬಿಡಿಸುತ.

ಬೆಳಗು ಬಾನೊಳು ಚಂದ್ರ ;
ಬೆಳಗಿಸೆನ್ನಯ ಮನವ,
ಸೆಳೆದು ನಿನ್ನೆಡೆಗೊಯ್ಯುತ.

ಏಳು ಮೇಲಕೆ ಬಿತ್ತ ;
ಕೆಸರ ಹಸುರನು ಮಾಡು ;
ಬೆಳಸು ನನ್ನೊಳಗೊಲುಮೆಯ.

ಕೆದರು ಸೋಗೆಯ ನವಿಲೆ ;
ಕೆದರಿ ಜಾಗರವಾಡು ;
ಮುದದ ಮೇರೆಯ ನಿಲುಕಿಸು.

ಹೊಳೆಯೆ, ನಿಲ್ಲದೆ ಜಾರು ;
ಜಾರುವಾಗಲೆ ಹಾಡು ;
ನಗಿಸು ಹಾಡುತ ಬಯಲನು.

ಮುಗಿಲ ಬಳಿಯಲಿ ಹಕ್ಕಿ,
ಚಿಮ್ಮುತ್ತಾಡುತ ಸೊಕ್ಕಿ,
ಕುಣಿಸು ನನ್ನನು ಹರುಷದಿ.

ಹಾಡು ಹಕ್ಕಿಯೆ, ಮುದದಿ
ಕೂಡಿಸುತ ನನ್ನೆದೆಯ
ಗಾನವನು ನಿನ್ನ ದನಿಗೆ.

ಎ. ಕೆ. ಪುಟ್ಟರಾಮು.

# ಕವಿತೆಗೆ

ನಾನೇಕೆ ಕೊರಗುವೆನು,
ದೀನನಂತಳಲುವೆನು,
ಬಳಲುವೆನು ನಿನ್ನನರಸಿ ?
ಯಾವ ಮಾಯೆಯು ನನ್ನ-
ನಾವರಿಸಿತೋ ಕಾಣೆ !
ತಿಳಿವಳಿಕೆಯೆಲ್ಲಡಗಿತು ?

ಎಲ್ಲಿ ನಿನ್ನಾ ಪದವಿ,
ಎಲ್ಲಿ ನನ್ನೀ ತೊದಲು ;
ಸಂಬಂಧವೆರಡಕೆಲ್ಲಿ !
ಅರಸುಗುವರಿಯು ಕೈಗೆ
ತಿರುಕನೆಳಸುವುದುಂಟೆ ;
ನಂಬುವರೆ ಕೇಳಿದವರು ?

ಅಯ್ಯೋ, ನನ್ನಾಸೆಯೇ,
ಅಯ್ಯೋ, ಒಣಹಂಬಲೇ,
ತಲೆಯನೆತ್ತುವಿರೇತಕೆ !
ಬೇಡಿದರೆ ಸಾರುವಳೆ,
ಕಾಡಿದರೆ ಸಿಕ್ಕುವಳೆ,
ಒಲಿಯುವಳೆ ಪೀಡಿಸಿದರೆ !

‘ ಹುಚ್ಚು ಈ ತರುಣನಿಗೆ
ಹೆಚ್ಚಿ ಹೋಯಿತು ’ ಎಂದು
ಕಂಡ ಜನರೆಲ್ಲ ನಗರೆ !
ನನ್ನಳವು ತಿಳಿದರೂ,
ನಿನ್ನ ಮುನಿಸಿರಿದರೂ,
ಮೊಂಡಾಟವಣಗದಲ್ಲ !

ತುದಿಗೆ ಹಾರಲು ರೆಕ್ಕೆ-
ಯೊದಗಡೆಯೆ ಬಯಸುವೆನು.
ಚೆಂದದೀ ಕೋರಿಕೆಯನು
ಸಲ್ಲಿಸಲು ನೀನರಿಯೆ,
ನಿಲ್ಲಿಸಲು ನಾನರಿಯೆ ;
ಹೊಂದಿತಲ್ಲನೆ ಜೋಡಿಯು !

ಬೀ. ನಂ. ಶ್ರೀಕಂಠಯ್ಯ.

## ಹೀರೆಯ ಹೂವು

ಮಾಡಲು ಏನೂ ಕೆಲಸವೆ ಇಲ್ಲ ;
ಓದಲು ಮನಸಿಲ್ಲ.
ಆಡುವೆನೆಂದರೆ ವಾಸುವು ಇಲ್ಲ ;
ಹಾಡಲು ರಮೆಯಿಲ್ಲ !
ಕವಿತೆಯ ರಚಿಸಲು ಭಾವವೆ ಇಲ್ಲ ;
ಸುಮ್ಮನೆ ಇರಲೂ ಆಗುವುದಿಲ್ಲ !

ಅಂಗಳದಲ್ಲಿಹ ಹೀರೆಯ ಹೂವೇ,
ನಿನ್ನನೆ ನೋಡುವೆನು ;
ಹಳದಿಯನುಟ್ಟಿಹ ನಿನ್ನನು ಕುರಿತೇ
ಗೀತೆಯ ಹಾಡುವೆನು !
ಏನೆಂದುಲಿಯಲಿ ? ಹೂವೇ, ಹೇಳು ;
ಬಾಯಿಗೆ ಬಂದುದ ಹಾಡುವೆ ಕೇಳು !

ಯಾರೊಲಿದಂದಕೆ, ಯಾರ ವಿಲಾಸಕೆ
ನಿನ್ನನು ಹೋಲಿಸಲಿ ?
ಯಾವಾನಂದದ ಹರಿಯುವ ಹೊಳೆಯೊಳು
ನಿನ್ನನು ತೇಲಿಸಲಿ ?
ಒಲವಿನ ಹೂವೇ ! ಗೆಲವಿನ ಹೂವೇ !
ಚೆಲುವಿನ ಹೂವೇ ! ಹೀರೆಯ ಹೂವೇ !

ತಾರೆಗೆ ನಿನ್ನನು ಹೋಲಿಸಲಾರೆ,
ನಿನಗದು ಅಪಮಾನ ;
ಹೂವಾಗಿಹ ಮಿಂಚಿನ ಹುಳುವೆಂದರೆ
ನಿನಗದು ದುಮ್ಮಾನ ;
ಮೈದೋರಿಹ ಸೌಂದರವೆನಲೊಲ್ಲೆ :
ನಿನ್ನೀ ಬೆಡಗಿಗೆ ಇರುವುದೆ ಎಲ್ಲೆ !

ನೀನಪ್ಸರಕನ್ನಿಕೆಯೆನಲಾರೆ,
ನಗುವನು ವಿಜ್ಞಾನಿ ;
ಚೇತನವಿಲ್ಲದ ಜಡಹೂವೆನೆ ನಾ-
ನಾಗುವೆನಜ್ಞಾನಿ !
ದೇವತೆಯೆನೆ ನಾನತ್ಯಭಿಮಾನಿ !
ಹೀರೆಯ ಹೂವೆನೆ ಕವಿತೆಗೆ ಹಾನಿ !

ಕಾಮನ ಬಿಲ್ಲಿನ ಮುಗುಳೆನಲೇನು ?
ಹೇಳೈ ಎಲೆ ಹೂವೇ !
ಪ್ರೇಮದ ಬಳ್ಳಿಯ ಮುಗುಳೆನಲೇನು ?
ನಲಿಯುವ ವರಹೂವೇ !
ಹೋಲಿಸಲೆಳಸುವುದೇತಕೆ ನಾನು ?
ಅನುಪಮವಾಗಿಹೆ ಕುಸುಮವೆ ನೀನು !

ತಿರೆಗಿಳಿದರಳುವ ಮಿಂಚಿನ ಹನಿಯೆನೆ
ಅದು ನಿನಗತಿಮಾನ !

ಕವಿತಾವೇಶದ ಜ್ಯೋತಿಯ ಕಿಡಿಯೆನೆ
ನಿನಗದು ಬಹುಮಾನ !
ಹೋಲಿಸಲೇನೂ ತೋರುವುದಿಲ್ಲ !
ಹೀರೆಯ ಹೂವದು ಬೇರೆಯದಲ್ಲ !

ದೇವರ ಪೂಜೆಗೆ ಕೊಯ್ಯರು ನಿನ್ನ,
ಲಾಭದಪೇಕ್ಷೆಯಲಿ ;
ನಿನಗಿಹ ಮೈಮೆಯನರಿಯರು ಹೂವೇ,
ಲೋಭದುಪೇಕ್ಷೆಯಲಿ !
ಬೆಡಗನು ಬಿಸುಡುವೆ ಗರ್ವವ ನೀಗಿ,
ಕಾಯಾಗುವೆ ಧರ್ಮಕೆ ಶರಣಾಗಿ !

ಹೀರೆಯ ಹೂವೆಂದೊಲಿಯರು ನಿನ್ನ,
ಮುಡಿಯರು ರಮಣಿಯರು ;
ರಸಭಾವಗಳೊಂದಿಲ್ಲದೆ ಗಣಗಳ
ಹೊಸೆಯುವ ಕವಿಗಣವು
ನೇಯದು ಪದವೊಂದನು ನಿನಗಾಗಿ,
ಕುವಲಯಕಮಲಗಳಾಳಿಯ ನೀಗಿ !

ಸಮೆಯಲು ಸೌಂದರ ಮೈಮೆಗಳೆಲ್ಲಾ
ಲೋಭಿಗಳೊಲಿಯುವರು ;
ಹೃದಯದ ಸಂತಸವಿಳಿಯಲು ಉದರಕೆ
ಹೂವೇ, ನಲಿಯುವರು !

ಅವರಾದರ್ಶವು ಬರಿಯುಪಯೋಗ !
ಹೊಟ್ಟೆಯ ಭೋಗವೆ ಅವರಿಗೆ ಭೋಗ !

ಮಾಡಲು ಕೆಲಸವು ದೊರಕುವವರೆಗೂ
ನಿನ್ನನೆ ನೋಡುವೆನು !
ಆಡಲು ವಾಸುವು ಬರುವಾವರೆಗೂ
ನಿನ್ನೊಡನಾಡುವೆನು !
ಭಾವವು ನೀನೆಂದುಲಿಯುವೆ, ಹೂವೇ !
ನೀನೇ ರಮೆಯೆಂದೊಲಿಯುವೆ, ಹೂವೇ !

ಕೆ. ವಿ. ಪುಟ್ಟಪ್ಪ.

# ಪಾರಿಜಾತ

ಇಂದ್ರನ ಪುರದಲಿ ನೆಲಸಿದ ಹೂವೆ,
ಕೃಷ್ಣನ ಸತಿಯರು ಬಯಸಿದ ಹೂವೆ,
ನಕ್ಷತ್ರದವೊಲು ಮಿನುಗುವ ಹೂವೆ,
ವಜ್ರದ ಹರಳುಗಳಾರನು ಬಿಗಿದು
ಕೆಂಪಿನ ಕಾವನು ಜೋಡಿಸಿದೋಲೆಯು
ಚೆಲುವಿನ ಹೊಸ ಹೂವೆ !

ತಾವರೆಯೊಂದೇ ಜಗದಲಿ ಹೂವೆ ?
ಹುಚ್ಚರು ಹಿಂದಿನ ಕಬ್ಬಿಗರೆಲ್ಲ !
ನಿನ್ನಾ ಚರಿತೆಯು ಸೊಗಸನು ಮರೆತು,
ಚಿಕ್ಕವನೆನ್ನುತ ನಿನ್ನನು ತೊರೆದು,
ಕಮಲವ ಬಣ್ಣಿಸಿ, ಬಣ್ಣಿಸಿ, ಬಣ್ಣಿಸಿ,
ಗುರಿಯಾದರು ನಗೆಗೆ !

'' ರಮಣಿಯ ಕಂಗಳು ಕುಮುದಗಳಲ್ಲಿ,
ತಾವರೆಯಲಿ ಮುಖ, ಅಡಿ ಕಮಲದಲಿ,
ಮಲ್ಲಿಗೆಮುಗುಳಲಿ ದಂತದ ಸಾಲು,
ದೇಹವು ಸಂಪಗೆಯೆಸಳಲಿ,— ಇಂತು
ನಿರ್ಮಿಸಿ ಕವಿಗಳು ನನ್ನನು ಬಿಟ್ಟರೆ ! ''
ಎನ್ನುತ ಕೊರಗದಿರು.

ಲಲನೆಯುರಂಗಕೆ ಸಮವೆಂದೆನಿಸಿ
ಹೊಗಳಿಸಿಕೊಳುವುದೆ ಜನ್ಮದ ಫಲವೆ ?
ಆಸೆಯ ತೊಡಕಿನ ಬಲೆಯಲಿ ಬಿದ್ದು
ಬಳಲುವ ಮಾನವವರ್ಗವಿದೆಲ್ಲಿ,
ಆನಂದವನುಳಿದಿನ್ನೊಂದರಿಯದ
ಕುಸುಮವೆ ನೀನೆಲ್ಲಿ !

ಧರೆಯಲಿ ಹೆಸರನು ಪಡೆಯದೆ ಬಾಳಿ
ಸುಖವೇನೆನ್ನುವ ಚಿಂತೆಯಿದೇಕೆ ?
ಸ್ವರ್ಗಕೆ ಭೂಷಣವೆನಿಸಿದ ನಿನಗೆ
ನೆಲದವರೊಲಿಯದೆ ಬಿಟ್ಟರೆ ಬಿಡಲಿ,
ಮರುಳರು ಗುಣಗಳನರಿಯದೆ ಮರೆತರೆ
ಕುಂದಾವುದು ಗುಣಿಗೆ ?

ಹೆಚ್ಚಿನ ಸೊಬಗನು ಹೊರಗಡೆ ಬೀರಿ
ಮೆರೆಯದ, ಸರಳತೆ ತಾಳಿದ, ಹೂವೆ,
ನಾನೇ ನಿನ್ನನು ಮೆಚ್ಚದೆ ಹಿಂದೆ
ಜರೆಯಲು, ಹೆರರನು ದೂರುವುದೇಕೆ ?
ಸಂಪಗೆ ಕಮಲ ಗುಲಾಬಿಯ ಹೆಮ್ಮೆಗೆ
ಮರುಳಾದೆನು ಮೊದಲು.

—ಎಳೆತನದಲಿ ಹೂಗೊಯ್ಯುವೆನೆಂದು
ಅರುಣನು ಹೊರಡುವ ಮೊದಲೇ ಬಂದು

ಏರುತ ರೆಂಬೆಯನಲ್ಲಾಡಿಸಲು
ಸುರಿಯದೆ ಕುಸುಮಗಳವಿತಿರಲಾಗ
“ಪಾಪಿಯೆ ಹೂವೇ, ಬೀಳೆಯ!” ಎನ್ನುತ
ನಿನ್ನನು ಶಪಿಸಿದೆನು.

ಮೂಡುವ ಸೂರ್ಯನ ಕೆಂಪಿನ ಬೆಳಕು
ಗಿಡದಲಿ ಹರಡುತ ಥಟ್ಟನೆ ಕಳಚಿ
ತೂರಿದ ಹೂವಿನ ಮಳೆಯಲಿ ನೆಲವು
ಮುಚ್ಚುತ ಹಸುರೇ ಕಾಣಿಸದಿರಲು,
ಪುಷ್ಪವನಾರಿಸಲಾರದೆ ಮಲೆಯುತ
ತುಳಿದೆನು ನಾನವನು.

ಎಳೆತನದಿಂದೊದಗಿದ ಪರಿಚಯವು,
ಗುಂಪಾಗೊಟ್ಟಿದ ಹೂವಿನ ಸೋಟ,—
ಇದರಿಂದರಿಯದೆ, ರೇಕುಗಳುದುರಿ
ಬೇಗನೆ ಕೆಡುವೀ ಹೂವೇಕೆಂದು
ಜೊತೆಯವರಿದಿರಲಿ ನಿನ್ನನು ಜರೆದೆನು.
—ಮನ್ನಿಸಿದೆಲ್ಲವನು.

ಈಚೀಚೆಗೆ ಬಹುದಿನಗಳ ಬಳಿಕ
ನಿನ್ನೊಳಗಡಗಿದ ಸತ್ತ್ವದ ಮಹಿಮೆ,
ಎಂತೋ ತಿಳಿಯೆನು! ಮೆಲ್ಲನೆ ನನ್ನ
ಅಂತಃಕರಣಕೆ ತಟ್ಟಿತು ಬಂದು.

ಮೊದಲಿನನಾದರವೆಲ್ಲವು ತೊಲಗಿತು ;
ಚಿಗುರಿತು ಭಕ್ತಿಲತೆ.

ಹೊರಗಿನ ಠೀವಿಗೆ ಬೆರಗಾಗುವರ
ಕಣ್ಣಿಗೆ ತಿಳಿಯದು ನಿನ್ನಾ ಸೊಗಸು ;
ಇದು ಗುಣವೆನ್ನುತ ಬೆರಲನು ನೀಡಿ
ತೋರಿಸಲರಿಯೆನು ಕೇಳುವ ಜನಕೆ.
ಆದರೆ ಕುಂದೇನಿದರಲಿ, ಹೃದಯವೆ
ಒಲಿದೊಪ್ಪಿದ ಮೇಲೆ ?

ತಿಂಗಳ ಮೊದಲಿನ ಚಂದ್ರನ ಕಳೆಯು
ತೆರದಲಿ ದಿನದಿನಕೇರುವುದೊಲವು.
ಪರಿಚಯದೊಂದಿಗೆ ಹೆಚ್ಚುವ ಕೆಳೆಯೆ
ಮುರಿಯದೆ ಸಡಿಲದೆ ಬೇರೂರುವುದು.
ಹೀಗೆಯೆ ಬಲಿಯಲಿ, ಫಲಿಸಲಿ, ನಮ್ಮಾ
ಪ್ರೇಮದ ಲತೆ ಮುಂದೆ.

ತಿ. ನಂ. ಶ್ರೀಕಂಠಯ್ಯ.

# ಹಕ್ಕಿಗೆ

ಮನದಿ ಬೇಸರಗೊಂಡು ನಿನ್ನೆಡೆಗೆ ಬಂದಿಹೆನು,
ಸವಿನುಡಿಯನಾಡೆಲವೊ ಸಣ್ಣ ಹಕ್ಕಿ.
ಕೆಟ್ಟ ಮಾತನು ಕೇಳಿ ನೊಂದು ಬಂದಿಹೆ ನಾನು,
ರಾಗದಲಿ ಹಾಡೆಲವೊ ಪುಟ್ಟ ಹಕ್ಕಿ.
ಏತಕೀಪರಿ ನೀನು ಸುಮ್ಮನೆಯೆ ಕುಳಿತಿರುವೆ ?
ಕೊರಳ ಕೊಂಕಿಸುತಾರ ನೆನೆಯುತಿರುವೆ ?
ಗಗನಚಾರಿಯೆ, ನಿನಗೆ ಜೀವನದಿ ಬೇಸರವೆ ?
ಹೇಳೆಲವೊ ನನ್ನಲ್ಲಿ ನಿನ್ನ ಮನವ.

ಹಸಿದಿಹೆಯ ? ಬಿಸಿಲಲ್ಲಿ ಹಾರಾಡಿ ಬಳಲಿಹೆಯ ?
ಬಳಲಿಕೆಯು ಮೊಗದಲ್ಲಿ ತೋರುತಿಲ್ಲ.
ಕೋಪ ಬಂದಿತೆ ಹಕ್ಕಿ ?—ನಿನ್ನಾಲಿ ಕೆಂಪೇರಿ
ಕಿರುಗಿಡಿಯ ಕಾರುವುದು ಕಾಣುತಿಲ್ಲ.
ರಾಗದಲಿ ನನಗೆಣೆಯು ಮತ್ತೊಬ್ಬರಿಲ್ಲೆನುತ
ಬೀಗಿಹೆಯ ಬಿಂಕದಲಿ ಬೆಡಗುಗಾರ ?
ನನ್ನಂತೆಯೇ ನಿನಗೆ ಕೋಪತಾಪಗಳುಂಟೆ ?
ನನ್ನಲ್ಲಿ ಹೇಳಿಬಿಡು, ಬೆದರಬೇಡ.

ಸಂಪಗೆಯ ಹೂವಿನೊಲು ಸೊಂಪಾದ ನುಣ್ಗೊರಳ
ನೀನಾವ ಕಾರಣದಿ ಕೊಂಕಿಸಿರುವೆ ?
ಉಪ್ಪಿಗಚಿಮೊಳೆಯಲ್ಲಿ ಮುತ್ತುಗಳ ಬಿಗಿದಂತೆ
ಹಣ್ಣುಗಳು ತುಂಬಿಹುವು, ತಿರುಗಿ ನೋಡು.

ಸಣ್ಣ ಪಂಜುಗಳನ್ನು ಹಿಡಿದೆತ್ತಿ ತೋರುವೀ
ಹೂಬಿಟ್ಟ ದಾಳಿಂಬೆಮರವ ನೋಡು.
ನೀನಿರುವ ಸುರಹೊನ್ನೆಕೊನೆಯಲ್ಲಿ ಹೂವೊಂದು
ಅರೆವಿರಿದು ನಸುನಗುತಲಿಹುದು, ನೋಡು.

ಕೊರಳೊಳಗೆ ತುಂಬಿರುವ ಸಂಗೀತರಸವನ್ನು
ಕಿವಿಗೆರೆದು ಮನದಳಲ ತಂಪುಗೊಳಿಸು.
ನಿನ್ನಂಗದೀ ಸೊಬಗನೆಲ್ಲಿಂದ ತಂದಿರುವೆ ?
ಹಾಡುತ್ತ ಹೇಳದನು, ಮುದ್ದುಹಕ್ಕಿ.
ತುಂಬಿರುವ ಹರುಷದಲಿ ನೀನಿಂತು ಮಾತುಳಿದು
ಮೈಮರೆತು ಕುಳಿತಿರುವೆ ; ತಿಳಿಯಿತೀಗ.
ರಾಗದಲಿ ಹಾಡೆಲವೊ ಬಲುನರಳ, ಸವಿಗೊರಳ,—
ಜೀವನವ ಸವಿಮಾಡಿ ನಲಿವುದೆಂತು ?

ನನುವಿರಿದು ಮುಗಮುಗಿಪ ಮಲ್ಲಿಗೆಯ ಸೌರಭವ
ಕಿವಿಯೆಂತು ಸವಿನೋಳ್ಪುದದನು ತಿಳಿಸು.
ಹರಳುಗಲ್ಲಿನ ಮೇಲೆ ಹರಿವ ಹೊನಲಿನ ನೀರ
ನಿನದವನ್ನನುಕರಿಸು, ಕೇಳ್ವೆ ನಾನು.
ಬೆಳುದಿಂಗಳಲಿ ಹೂವ ಮುಡಿದಿರುವ ಹಂಬಿನಾ
ಚೆಂದವನು ಹಾಡಿನಲಿ ತೋರು ನನಗೆ.
ಸವಿಹಾಡ ಮಳೆಗರೆದು ನುಣ್ಚರದ ಹೊಳೆಯಲ್ಲಿ
ತೇಲಿಸೆನ್ನನು ಮುದದಿ, ಮುದ್ದುಹಕ್ಕಿ.

ಕಾನನದೊಳರಳಿರುವ ಹೂವುಗಳು ಪರಿಮಳವ
ಮಾರುತಗೆ ಬೀರದೆಯೆ ಸುಮ್ಮನಿಹವೆ ?
ಬನದ ಬಳ್ಳಿಯು ತನ್ನ ಕೆಂದಳಿರ ಮರೆಮಾಡಿ
ಚೆಂದವನು ಜನಗಳಿಗೆ ತೋರದಿಹುದೆ ?
ಮಕರಂದವನು ಹೂವು ದುಂಬಿಗೀಯದೆ ತಾನೆ
ಪಾನಮಾಡಿಹುದನ್ನು ನೋಡಿರುವೆಯಾ ?
ನಿನ್ನೊಳಗೆ ತುಂಬಿರುವ ಸಂಗೀತವನು ನೀನು
ಬಿಡದಿಂತು ನುಂಗುವುದು ತರವೆ ? ಹೇಳು.

ಜತೆಯವರು ನಲವಿಂದ ಹಾಡುತಿರೆ ನೀನೇಕೆ
ದೂರದಲಿ ಮೌನದಲಿ ತಪಿಸುತಿರುವೆ ?
ಹಾಲುಬತ್ತದ ತೆನೆಯ ಕೊಕ್ಕಿನಲಿ ಬಿಗಿಹಿಡಿದು
ಫರಫರನೆ ಬರುತಿಹಳು ನಿನ್ನ ಗೆಳತಿ.
ನೋಡಿಲ್ಲಿ ನಿನ್ನೆಡೆಯೆ ನಿಂತಿರುವ ನಲ್ಲೆಯನು,
ಮಾತನಾಡಿಸು ಬೇಗ ಬಳಲಿರುವಳು,
ಇನ್ನು ತೊರೆ ಮೌನವನು, ಮನವನ್ನು ಹೇಳಿಬಿಡು ;
ಕೇಳ್ವುದಕೆ ಕೌತುಕದಿ ಕುದಿಯುತಿಹಳು.

ಸುಖಿಗಳಿರ ನಿಮ್ಮ ನುಡಿಗಳನು ಕೇಳಿ
ಬೇಸರವ ತೊರೆದು ಸಂತಸವ ತಾಳಿ
ನೀವಿತ್ತ ಮುದವ ಜನಕೆಲ್ಲ ಸಾರಿ
ನಲಿವೆ ನಾಂ ನಿಮ್ಮನ್ನೆ ನೆನೆದು ನೆನೆದು.

ಎ. ಕೆ. ಪುಟ್ಟರಾಮು.

# ಅರ್ಧಚಂದ್ರ

ದೇವರ ಪೆಪ್ಪರಮೆಂಟೇನಮ್ಮಾ
ಗಗನದೊಳಲೆಯುವ ಚಂದಿರನು ?
ಎಷ್ಟೋ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟಮ್ಮಾ !

ದಿನದಿನ ನೋಡುವೆ : ದಿನವೂ ಕರಗುತ
ಎರಡೇ ವಾರದೊಳಳಿಯುವುದು !
ಮತ್ತದು ದಿನದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು !

ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮಾ ?—
ನೀನೂ ದೇವರ ಬಾಲಕನಾಗಲು
ನಿನಗೂ ಕೊಡುವನು, ಕಂದಯ್ಯ !—

ದೇವರ ಬಾಲಕನಾಗಲು ಒಲ್ಲೆ ;
ಆತನ ಮಾರಿಹೆ ನೀನಮ್ಮಾ !
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ.

**ಕೆ. ವಿ. ಪುಟ್ಟಪ್ಪ.**

# ಗುರು

ಸಂಪಗೆಹೂವನು ಸಂಪಗೆಹೂವೆಂ-
ದೇತಕೆ ಕರೆವರು ಹೇಳಮ್ಮಾ ?—
ಹಿಂದಿನ ಜನರದಕಾ ಹೆಸರಿಟ್ಟರು,
ಸಂಪಗೆ ಎನ್ನುವೆವದರಿಂದ.—

ಬೇರೆಯ ಹೆಸರುಗಳಾಗಿನ ಜನರಿಗೆ
ತಿಳಿದಿರಲಿಲ್ಲವೆ ಏನಮ್ಮಾ ?
ಸಂಪಗೆಗಿಂತಲು ತಂಪಿಗೆ ಎಂದಿರೆ
ಇಂಪಾಗಿರುವುದು ಕೇಳ್ವರಿಗೆ.

ಜನರೇನಮ್ಮಾ, ಹಿಂದಿನದೆಂದರೆ
ಕಂಗಳ ಮುಚ್ಚಿಯೆ ಪೂಜಿಪರು.
ನನ್ನೀ ಸಲಹೆಯನಾರೂ ಕೇಳರು,
ತಂಗಿಯು ಒಬ್ಬಳೆ ಒಪ್ಪಿಹಳು.

ಕಾಳಗೆ ಹೇಳಿದೆ, ಜಟ್ಟಿಗೆ ಹೇಳಿದೆ,
ತಿಮ್ಮಗೆ ದಿನದಿನ ಬೋಧಿಸಿದೆ.
ಎಲ್ಲಾ ಸಂಪಗೆ, ಸಂಪಗೆ ಎಂಬರು,
ತಂಪಿಗೆ ಎನ್ನುವರಾರಿಲ್ಲ !

ನಾನೂ ತಂಗಿಯು ತಂಪಿಗೆ ಎಂಬೆವು,
ನೀನೂ ತಂಪಿಗೆ ಎನ್ನಮ್ಮಾ !—
ಆಗಲಿ ! ನಾನೂ ತಂಪಿಗೆ ಎಂಬೆನು,
ನನಗೂ ತಂಗಿಗು ನೀನೆ ಗುರು !

**ಕೆ. ವಿ. ಪುಟ್ಟಪ್ಪ.**

# ಚಟಪಾಕಿ

ಅಪ್ಪನ ಜೇಬಿನ ದುಡ್ಡುಗಳೆಲ್ಲ
ಚಟಪಟಗುಟ್ಟುತ ಸಿಡಿಯುವುವು
ಒಪ್ಪದ ನೀತಿಯ ಮಾತುಗಳೆಲ್ಲ
ತಟ್ಟನೆ ದಾರಿಯ ಹಿಡಿಯುವುವು.
ಬಗೆಬಗೆಬಣ್ಣದ ಹೂಗಳ ರೂಪದಿ
ಹಾರುತ ಬುಸುಬುಸುಗುಟ್ಟುವುವು.
ಉರಿಯನು ಸುರಿಸುತ, ಮೊರೆಯುತ, ತಿರುಗುತ,
ಸರಸರನೆಲ್ಲೆಡೆ ಹರಿಯುವುವು,
ನರುವರ ಕಿವಿಗಳ ಕೊರೆಯುವುವು,
ಮೂಗಿನ ಸೆಲೆಗಳನೊಡೆಯುವುವು ;
ಸಾರವ ತೊರೆಯುತ ಕಡೆಯಲಿ ಕಪ್ಪಗೆ
ನೆಲದಲಿ ಧೊಪ್ಪನೆ ಕೆಡೆಯುವುವು,
ಅಜ್ಜನ ಮಡಿಯನು ಕೊಡೆಯುವುವು,
ಅಪ್ಪನ ಜೇಬುಗಳೊಡೆಯುವುವು,
ಸಿಡಿಯುವುವು.

ಕರ್ಬೊಗೆಯ ವೈಮೊಗರ ಹಬ್ಬಿಸುತ ಜಗಕೆ
ಮಬ್ಬ ಕವಿಸುತ ಬರುವ ದೇವಿ ಯಾರಿವಳು ?
ಕೆಂಜಡೆಯನಡಿಗಡಿಗೆ ಕೊಡಹುತ್ತಲಿಹಳು ;
ಕಿಡಿಗಣ್ಣ ಬಿರುಬಿರನೆ ತಿರುಗಿಸುತಲಿಹಳು.
ಉರಿಯ ನಾಲಗೆಗಳನು ಮುಂದೆ ಚಾಚಿಹಳು.

ತನಿಗೆಂಡದುಂಡೆಗಳ ತಾನುಗುಳುತಿಹಳು.
ಸಿಡಿಲ ನಡುಗಿಸುವಂತೆ ಬೊಬ್ಬಿರಿಯುತಿಹಳು.
ಕುಲಗಿರಿಗಳೊಡೆವಂತೆ ಅಡಿಯಿಡುತಲಿಹಳು.
ಯುದ್ಧನರ್ತನದಿಂದ ಮತ್ತಳಾಗಿಹಳು—
ಘೋರರೂಪದ ಕಾಳಿಕಾದೇವಿಯಿವಳು.

ಈ ಕರಾಳಿಯ ಕಂಡು ನಡುಗಿದೆನೊಡನೆ ನೆಲದಲಿ ಕೆಡೆದೆನು,
ಧೈರ್ಯವುಡುಗಲು ಸಣ್ಣ ದನಿಯೊಳಗಿನಿತು ಬೇಡುತ ನುಡಿದೆನು—
'' ತಾಯಿ ಕೃಪೆಯಲಿ ಕಾಯಿ ನಮ್ಮನು. ನಿನ್ನ ರೂಪವ ನೋಡಲು
ನಡುಗಿ ನಮ್ಮೆದೆ ತಡೆಯದೊಡೆವುದು ; ಸೌಮ್ಯರೂಪವ ತೋರಿಸು.
ರುಂಡಮಾಲೆಯ ರಕ್ತವಸ್ತ್ರವ ನೋಡುತಿರೆ ವ್ಯೆಮರೆವೆವು.
ಆ ಫಿರಂಗಿಯ ಗುಂಡಿನಬ್ಬರ ಕಿವಿಗೆ ಬೀಳಲು ಮಡಿವೆವು.
ನಮ್ಮ ಹಿರಿಯರು ನಿನ್ನ ಭಕ್ತರು ; ನಿನ್ನ ಪೂಜಿಸಿ ನಲಿದರು.
ಅವರ ಮಕ್ಕಳು ನಾವು ; ನಮ್ಮನು ಕರುಣೆಯಿಂದಲಿ ಪಾಲಿಸು.
ನಮ್ಮ ಹೆದರಿಕೆಯೋಡಿಸು ;
ಸೌಮ್ಯರೂಪವ ತೋರಿಸು.''

ನಾನಿಂತು ಕೈಮುಗಿದು ಹೊಗಳೆ,
ಕಣ್ಮುಚ್ಚಿ ಹೊಗಳುತಿರೆ ಮಗುಳೆ,
ಸಿಡಿಲಪರಿಯಬ್ಬರವು ಜಗುಳೆ,
ಗುಡುಗ ದನಿಯನುಕರಿಸುವಂತು
ಮಾಕಾಳಿ ನುಡಿದಳಿಂತು :

'' ಬೆದರಬೇಡಿರಿ, ಘೋರರೂಪವನು ತೋರಿಸೆನು. ಈ ಫಿರಂಗಿಯ ಗುಂಡ
ಸಿಡಿಸೆನಿಲ್ಲಿ.

ಪಡುವ ದಿಕ್ಕಿಗೆ ನಡೆದು ಕಡಲ ತೆರೆಗಳನೊಡೆದು, ನಡುಗಿಸುತ ಲೋಕ-
ವನು ಕುಣಿವೆನಲ್ಲಿ.

ಪಡುವ ನಾಡಿನ ಜನರ ಕಡೆಗಾಣದಸ್ತ್ರಗಳ ಹಿಡಿದು ವೈಗುಡಿಗಟ್ಟಿ
ಕುಣಿವೆನಲ್ಲಿ.

ಕಡುಮುದದಿ ಕುಣಿಕುಣಿದು ತಣಿವೆನಲ್ಲಿ.

ಕೆಂಡವನು ಕಾರುವ ಫಿರಂಗಿಗಳ ಗುಂಡುಗಳು ಗುಂಡಿಗೆಯನೊಡೆಯು-
ವುವೆ ? ಪಡುವಣವರು

ಕೊಂಡುಹೋಗಲಿ. ನಿಮಗೆ ತಕ್ಕುದಲ್ಲದು. ಪಾಪ ! ಮಕ್ಕಳಿರ, ನೀವೆ
ಮೃದುಹೃದಯದವರು !

ಮೆಚ್ಚಿದೆನು, ಮೆಚ್ಚಿದೆನು ಹೆಚ್ಚಿ ಬರುವೀ ನಿಮ್ಮ ಧೈರ್ಯದುಬ್ಬರವ
ನೋಡಿ !

ಮೆಚ್ಚನೀವೆನು ನಿಮಗೆ ಸಿಡಿವೀ ಚಟಾಕಿಯನು ; ಹಿಡಿಯಿರಿದ ಕೈಯ
ನೀಡಿ !

ಕಾರದಿದು ಕಿಡಿಗಳನು, ತೋರದಾರ್ಭಟಗಳನು ; ಹಾರುವುದು ಬಣ್ಣ-
ಗೂಡಿ.

ಮೀರಿದುತ್ಸಾಹದಲಿ ಸುಡಿರೀ ಚಟಾಕಿಯನು ; ನುಡುತಾಡಿ ಮೋದಗೂಡಿ!

ಹಿಡಿಯಿರಿದ ಕೈಯನೀಡಿ ! ''

ಹರಿಯಿತು ಹರ್ಷದ ಹೊನಲೀ ದೇಶದಿ ಹಬ್ಬವು ಹತ್ತಿರ ಬರುತಿರಲು,
ಹರಡುತ ಕಾಳಿಯ ವರದಾ ವಾರ್ತೆಯ ದೀಪಾವಳಿಯದು ಬರುತಿರಲು,
ಹೊರಲಾರದೆ ಸಾಹಸದಿ ಚಟಾಕಿಯ ಹೊರೆಗಳ ಮೆಲ್ಲನೆ ತರುತಿರಲು,
ಸಿಡಿವ ಚಟಾಕಿಯ ತರುತಿರಲು.

ಹುಡುಗರು ನಲಿಯುತ ಕುಣಿಕುಣಿದಾಡುತ ಹಿಡಿದು ಚಟಾಕಿಯ
ಸುಡುತಿಹರು.

ಸಿಡಿದು ಚಟಾಕಿಯು ಮೇಲಕೆ ಹಾರಲು ನಿಲ್ಲದೆ ಚಪ್ಪಳೆ ತಟ್ಟುವರು.

ಸಡಗರಗೊಳ್ಳುತ ದೂರದಿ ನೋಡುತ ಲಲನೆಯರೆಲ್ಲರು ನಗುತಿಹರು.

ಸಿಡಿಯೆ ಚಟಾಕಿಯು ನಗುತಿಹರು.

ಹುದ್ದಿನ ದೇವಿಯು ಮುದ್ದಿನ ಮಕ್ಕಳು ಗದ್ದಲಮಾಡುತ ಬರುತಿಹರು.

ಮುದ್ದಿನ ಮಕ್ಕಳ ನಿದ್ದಯನೋಡಿಸಿ ನಗಿಸುತ ಕುಣಿಸುತ ಬರುತಿಹರು.

ಚಟಪಟಗುಟ್ಟಿ ಚಟಾಕಿಯು ಮುಂಗಡೆ ಠೀವಿಯ ತೋರುತ ಬರು-
ತಿರಲು,

ಪೆಟ್ಟಿಗೆ ಚಟ್ಟನೆ ಸಿಡಿವ ಪಟಾಸಿನ ಬಳಗವು ಹಿಂಬಾಲಿಸುತಿರಲು,

ಅರಳನು ಹುರಿಯುವ ಪರಿಯಲಿ ಮೊರೆಯುತ ಬಲುಚಿನುಕುರುಳಿಗ-
ಳೈತರಲು,

ಸರಸರ ಗರಗರ ಶಬ್ದದಿ ಮೊರೆಯುತ ತಿರುಗುವ ಬಾಣಗಳೈತರಲು,

ಬೆಳಕನು ಬೀರಿ ಮತಾಪಿನ ಸಾಲ್ಗಳು ಪಂಜನು ಹಿಡಿಯುತ ಬರು-
ತಿರಲು,

ಹೊಳೆಯುವ ಹೂಗಳ ಮಳೆಯನು ಸುರಿಸುತ ಹೂವಿನ ಬಾಣಗ-
ಳೈತರಲು,

ಒಡೆಯ ಚಟಾಕಿಯು ಬರುತಿರಲು,

ಕಡುಹಿತದಿಂದಲಿ ಬರುತಿರಲು ;

ಹರಿಯಿತು ಹರ್ಷದ ಹೊನಲು ಚಟಾಕಿಯ ಮೊಳಗದು ಹತ್ತಿರ
ಬರುತಿರಲು,

ದೀಪಾವಳಿಯದು ಬರುತಿರಲು.

ಅಪ್ಪನ ಜೇಬಿನ ದುಡ್ಡುಗಳೆಲ್ಲ ಚಟಪಟಗುಟ್ಟುತ ಸಿಡಿಯುವುವು.
ಹಾರುತ ಬುಸುಬುಸುಗುಟ್ಟುವುವು,
ಉರಿಯನು ಸುರಿಸುತ ಮೊರೆಯುವುವು,
ಸರಸರನೆಲ್ಲೆಡೆ ಹರಿಯುವುವು.
ಒಪ್ಪದ ನೀತಿಯ ಮಾತುಗಳೆಲ್ಲ ತಟ್ಟನೆ ದಾರಿಯ ಹಿಡಿಯುವುವು.

ಎಲ್. ಗುಂಡಪ್ಪ.

# ಬೊಮ್ಮನಹಳ್ಳಿಯ ಕಿಂದರಿಜೋಗಿ

೧

ತುಂಗಾತೀರದ ಬಲಗಡೆಯಲ್ಲಿ
ಹಿಂದಲ್ಲಿದ್ದುದು ಬೊಮ್ಮನಹಳ್ಳಿ.
ಅಲ್ಲೇನಿಲಿಗಳ ಕಾಟವೆ ಕಾಟ !
ಅಲ್ಲಿಯ ಜನಗಳಿಗತಿಗೋಳಾಟ !
ಇಲಿಗಳು ಬಡಿದುವು ನಾಯಿಗಳ !
ಇಲಿಗಳು ಕಡಿದುವು ಬೆಕ್ಕುಗಳ !
ಕೆಲವನು ಕೊಂದುವು, ಕೆಲವನು ತಿಂದುವು,
ಕೆಲವನು ಬೆದರಿಸಿ ಹಿಂಬಾಲಿಸಿದುವು.
ಅಲ್ಲಿಯ ಮೂಷಿಕನಿಕರವು ಸೊಕ್ಕಿ
ಎಲ್ಲರ ಮೇಲೆಯು ಕೈಬಾಯಿಕ್ಕಿ
ಹೆದರಿಕೆಯಿಲ್ಲದೆ, ಬೆದರಿಕೆಯಿಲ್ಲದೆ
ಕುಣಿದುವು ಯಾರನು ಲೆಕ್ಕಿಸದೆ !
ಹಾಲಿನ ಮಡಕೆಯನೊಡೆದುವು ಕೆಲವು ;
ಅನ್ನದ ಗಡಿಗೆಯ ಪುಡಿಮಾಡಿದುವು.
ಬಡಿಸುವ ಅಡುಗೆಯ ಭಟ್ಟನ ತಡೆದು
ಕೈಯಲ್ಲಿರುವಾ ಸಟ್ಟುಗವ
ಭೀತಿಯೆ ಇಲ್ಲದೆ ನೆಕ್ಕಿದುವು ;
ಈಪರಿ ತಿನ್ನುತ ಸೊಕ್ಕಿದುವು ;
ಧಾನ್ಯವನೆಲ್ಲಿಯು ಬಿಕ್ಕಿದುವು !

ಟೋಪಿಯ ಒಳಗಡೆ ಗೂಡನು ಮಾಡಿ
ಹೆತ್ತುವು ಮರಿಗಳನು ;
ಪೇಟದ ಒಳಗಡೆ ಆಟವನಾಡಿ
ಕಿತ್ತುವು ಸರಿಗೆಯನು !
ಗೋಡೆಗೆ ತಗುಲಿಸಿದಂಗಿಯ ಜೇಬನು
ದಿನವೂ ಜಪ್ತಿಯ ಮಾಡಿದುವು !
ಮಲಗಿರೆ ಹಾಸಿಗೆಯನ್ನೇ ಹರಿದುವು
ಕೇಶಚ್ಛೇದವ ಮಾಡಿದುವು !
ಬೆಣ್ಣೆಯ ಕದ್ದುವು ಬೆಲ್ಲವ ಮೆದ್ದುವು
ಎಣ್ಣೆಗೆ ಬಿದ್ದುವು ದಿನದಿನವು !
ಗೌಡರು ಮಾತಾಡುತ ಕುಳಿತಲ್ಲಿ
ಬಹಳ ಗಲಾಟೆಯ ಮಾಡಿದುವು !
ಗರತಿಯರಾಡುವ ಹರಟೆಗೆ ತುಂಬಾ
ತೊಂದರೆಯಿತ್ತುವು ಗಜಿಬಿಜಿಮಾಡಿ.
ಊರಿನ ಮಕ್ಕಳ ಕೈಲಿದ್ದ
ತಿಂಡಿಯ ಕಸಿದುವು ಧೈರ್ಯದಲಿ !

೨

ಇಲಿಗಳ ಕೊಲ್ಲಲು ಊರಿನ ಜನರು
ತುಂಬಾ ಯತ್ನವ ಮಾಡಿದರು ;
ಕಡಿಪರೆ ಮುರಿದುವು ಕತ್ತಿಗಳೆಲ್ಲಾ,
ಹೊಡೆದರೆ ಮುರಿದುವು ಕೋಲುಗಳು.

ಇಲಿಗಳ ಬೇಟೆಯನಾಡುತಲಿರಲು
ಮುರಿದುವು ತಿಮ್ಮನ ಕಾಲುಗಳು !
ಬೇಟೆಯನಾಡಲು ಅಡುಗೆಯ ಮನೆಯಲಿ
ಬಿದ್ದಳು ಬಳೆಯೊಡೆದಚ್ಚಮ್ಮ !
ಭೃಂಗಾಮಲಕದ ತೈಲವ ಹಚ್ಚಿದ
ಶೇಷಕ್ಕನ ನುಣ್ಣನೆ ಫಣಿವೇಣಿ,
ಬೆಳಗಾಗೇಳುತ ಕನ್ನಡಿನೋಡೆ
ಇಲಿಗಳಿಗಾಗಿತ್ತೂಟದ ಪೇಣಿ !
ರಾತ್ರಿಯ ವೇಳೆಯಲೋಡುತ ಕೊಟ್ಟಿಗೆ-
ಗುಂಡುವು, ತಿಂದುವು ದನಗಳ ಕೆಚ್ಚಲ,
ಹರಿದುವು ಕರುಗಳ ಬಾಲಗಳ !
ಸಿದ್ದೋಜೈಗಳು ಶಾಲೆಗೆ ಹೋಗಿ
ಪಾಠವ ಬೋಧಿಸುತಿದ್ದಾಗ
ಅಂಗಿಯ ಜೇಬಿಂ ಹೆಳವಿಲಿಯೊಂದು
ಚಂಗನೆ ನೆಗೆಯಿತು ತೂತನು ಮಾಡಿ.
ಲೇವಡಿ ಎಬ್ಬಿಸೆ ಬಾಲಕರಾಗ
ಗುರುಗಳಿಗಾಯಿತು ಬಲು ಗೇಲಿ !
ಹರಿಯಲು ರೇಶ್ಮೆಯ ರವಕೆಯ ಕಣಗಳ,
ಕೊಚ್ಚಲು ಕಾಗಿನ ಸೀರೆಯನು,
ಮುಂಗಾಣದೆ ಜಟ್ಟಕ್ಕನು ಹೋಗಿ
ಬತ್ತಿದ ಕೆರೆಯನು ಹಾರಿದಳು ;
ಸತ್ತೇ ಎನ್ನುತ ಚೀರಿದಳು !

ಬೆಳಗಿನ ಜಾವದಿ ಏಳುತ ನೋಡಲು
ಭಟ್ಟಾಶಾಸ್ತ್ರಿಯು ಜನಿವಾರ
ಇಲಿಗಳಿಗಾಗಿತ್ತಾಹಾರ !
ಒಂದಿಲಿ ಸತ್ತರೆ ಎರಡಿಲಿಯಾದುವು,
ಕೊಂದರೆ ಒಂದನು ಎರಡೈತಂದುವು !
ಇಲಿಗಳ ಕಾಟವ ಸಹಿಸಲು ಆರದೆ
ಊರಿನ ಜನರೆಲ್ಲರು ಒಂದಾಗಿ
ಮೂಷಿಕಯಾಗವ ಮಾಡಿದರು,
ದೇವರ ಪೂಜೆಯ ಮಾಡಿದರು,
ಹರಕೆಯ ಹೊತ್ತರು, ಕಾಣಿಕೆ ತೆತ್ತರು,
ಮಂತ್ರವ ದಿನದಿನ ಹೇಳಿದರು !
ನಿಷ್ಫಲವಾದುವು ಮಂತ್ರಗಳೆಲ್ಲಾ,
ಬಾಯ್ಬಾಯ್ಬಿಡದರು ಶಾಸ್ತ್ರಿಗಳೆಲ್ಲಾ,
ಕಣ್ಕಣ್ಬಿಟ್ಟರು ಪಂಡಿತರೆಲ್ಲಾ,
ಕಂಬನಿಗರೆದರು ಜನರೆಲ್ಲಾ !

೩

ಮುಂದಿನ ಮಾರ್ಗವ ಕಾಣದೆ ಜನರು,
ಗೌಡನ ಬಳಿ ಹೋದರು ಗುಂಪಾಗಿ :
ಗೌಡನು ಮನೆಯಿಂದೀಚೆಗೆ ಬಂದನು
ಕಂಗಳನರಳಿಸಿ ಬೆರಗಾಗಿ !

ಕೂಗಿದರೆಲ್ಲರು ಗೌಡನ ಕುರಿತು,
ಗೌಡನು ನಿಂತನು ಮೈಮರೆತು :
'' ಥೂ ! ಛೀ ! ಗೌಡನೆ ನೀ ಹಾಳಾಗ !
ಮಾರಿಯು ಇಲಿಗಳ ಕೊಲ್ಲಿಸೊ ಬೇಗ !
ತರಿಗೆಯು ಮಾತ್ರಾ ಕಾಸೂ ಬಿಡದೆ
ಹೊಡೆದೂ ಬೈದೂ ಎತ್ತುವೆ ನೀನು.
ನಿನ್ನ ರುಮಾಲಿನ ಜರಿ ಹಾಳಾಗ,
ನಿನ್ನೀ ಗಂಟಲು ಕಟ್ಟೀ ಹೋಗ !
ಇಲಿಗಳ ಸಹಿಸೆವು ಕೊಲ್ಲಿಸೊ ಬೇಗ !
ಬೆಂಕಿಯನಿಡುವೆವು ನಿನ್ನೀ ಮನೆಗೆ,
ಕೊಲ್ಲಿಸದಿರೆ ಬರೆಯಿಡುವೆವು ನಿನಗೆ !
ಹೆಸರಿಗೆ ಮಾತ್ರಾ ಗೌಡನೆ ನೀನು ?
ಮಾನವೆ ಇಲ್ಲವೆ, ಛೀ ! ನಿನಗೇನು ?

೪

ಈ ಪರಿ ಬೈದರು ಜನರೆಲ್ಲಾ ;
ಗೌಡನು ಬಾಯ್ನೀ ಬಿಡಲಿಲ್ಲಾ !
ಜನರೆಲ್ಲಾ ಹಿಂತಿರುಗಿದ ಮೇಲೆ
ಗೌಡನು ಓಡಿದ ಚಾವಡಿಗೆ ;
ಕಳೆದನು ಊರಿನ ತಲೆಯಾಳುಗಳ ;

ಕಟ್ಟೆಯೊಳಲ್ಲಿಯೆ ಸಭೆಸೇರಿದರು.
ದಿನವೆಲ್ಲಾ ಚರ್ಚೆಯು ಮಾಡಿದರು ;
ದಿನವೆಲ್ಲಾ ವಾದವ ಹೂಡಿದರು.
ಹೊರಟವು ಯುಕ್ತಿಯ ಮಾತುಗಳು,
ಮಾತೊಳು ಮನೆಯನು ಕಟ್ಟಿದರು.
ಅಂತೂ ಇಲಿಗಳ ಕೊಲ್ಲುವ ಬಗೆಯು
ಒಬ್ಬರಿಗಾದರು ಹೊಳೆಯಲಿ ಇಲ್ಲ.
ಗೌಡನು ತಲೆತಲೆ ಹೊಡಕೊಂಡ ;
ಅಲ್ಲದೆ ಎದೆಯೆದೆ ಬಡುಕೊಂಡ :
ಕಡೆಗಾ ರಂಗೇಗೌಡನು ಊರಿಗೆ
ಬೆಂಕಿಯ ಹಾಕುವ ಸಲಹೆಯ ಕೊಟ್ಟ !
ಊರನೆ ಖಂಡಿತ ಬಿಡಬೇಕೆಂದು
ರಾಮಾಶಾಸ್ತ್ರಿಗಳಾಡಿದರು !
ತಿಪ್ಪಂಭಟ್ಟರು ಚಿಂತಿಸಿ ಚಿಂತಿಸಿ
' ದೇವರು ಮಾಡಿದುದಾಗಲಿ ' ಎಂದರು !
ಸಲಹೆಗಳೆಲ್ಲಾ ಮುಗಿದಾ ಮೇಲೆ
ಗೌಡನು ಜನರನು ಕುರಿತಿಂತೆಂದ :
' ಇಲಿಗಳ ನಾಶಕುಪಾಯವನಾರು
ತೋರಿಸಿ ಕೊಡುವರೊ ಅವರಿಗೆ ಆರು
ಸಾವಿರ ನಾಣ್ಯಗಳೀಯುವೆ ನಾನು ;
ತಿಳಿದವರಿದ್ದರೆ ಬನ್ನಿರಿ ! ಏನು ? '

೫

ಒಬ್ಬರ ಮೊಗವನು ಒಬ್ಬರು ನೋಡಿ
ಮಾತಾಡದೆ ಇದ್ದರು ಜನರೆಲ್ಲಾ !
ಗೌಡನು ಕೂಗಿದ ಮೊದಲನೆ ಸಾರಿ ;
ಯಾರೂ ಮುಂದಕೆ ಬಾರಲೆ ಇಲ್ಲ.
ನಾಣ್ಯಗಳೆಂಬಾ ಮಾತನು ಕೇಳಿ
ಮುಂಗೈಶೆಟ್ಟರು ಕೋಪವ ತಾಳಿ
ಬ್ರಹ್ಮನ ರಾಣಿಯು ದೂರಿದರು !
ಮೆದುಳನು ನೀಡದೆ ತಲೆಯನು ಮಾಡಿದ
ಕಮಲಜನನು ಬೈದಾಡಿದರು !
ಸುತ್ತಲು ನೋಡುತ ಗೌಡನು ಮತ್ತೆ
ಎರಡನೆ ಸಾರಿಯು ಕೂಗಿದನು.
ಆಸೆಯನೆಲ್ಲವ ನೀಗಿದನು ;
ಕೂಗಿದನಾತನು ಮೂರನೆ ಸಾರಿ ;
ಮಾತೇ ಇಲ್ಲವು, ಎಲ್ಲಿಯು ಮೌನ !
ಮುಂದಲೆ ಒಂದಲೆ ಎರಡನು ಉಜ್ಜುತ,
ಕಂಗಳ ಕೆರಳಿಸಿ, ಹಲ್ಲನು ಕಡಿಯುತ,
ಶೆಟ್ಟರು ಬಲು ಮೇಚಾಡಿದರು.
ಆವೇಶವ ದಯಪಾಲಿಸು ಎನ್ನುತ
ವಾಣಿಯ ಪರಿಪರಿ ಬೇಡಿದರು !

ಏನಿದು ಗುಜುಗುಜು ಗುಂಪಿನಲಿ ?
ನೋಡಿದಿರೇನಾಶ್ಚರ್ಯವನು ?
ಆಲಿಸಿ ! ದೂರದ ಕಿಂದರಿನಾದ !
ಬರುವನು ಯಾರೋ ಕಿಂದರಿಜೋಗಿ !
ಹತ್ತಿರ, ಹತ್ತಿರಕವನೈತಂದ ;
ಬಂದಿತು ಜನರಿಗೆ ಒಂದಾನಂದ !
ನೋಡಿರಿ ! ನೋಡಿರಿ, ಕಿಂದರಿಜೋಗಿ !
ನೋಡಿದರೆಲ್ಲರು ಬೆರಗಾಗಿ !
ಬಂದನು ! ಬಂದನು ಕಿಂದರಿಜೋಗಿ !
ಕೆದರಿದ ಕೂದಲ ಗಡ್ಡದ ಜೋಗಿ !
ನಾನಾ ಬಣ್ಣದ ಬಟ್ಟೆಯ ಜೋಗಿ !
ಕೈಯಲಿ ಕಿಂದರಿಹಿಡಿದಾ ಜೋಗಿ !
ಕುದುರೆಯ ಗೊರಸಿನ ಅಡಿಗಳ ಜೋಗಿ !
ಕಡವೆಯ ಕೊಂಬಿನ ತಲೆಯಾ ಜೋಗಿ !
ಆನೆಯ ಕಿವಿಗಳ ಕಿಂದರಿಜೋಗಿ !
ಹಂದಿಯ ದಾಡೆಯ ಕೋರೆಯ ಜೋಗಿ !
ಮಂಗನ ಮೂತಿಯ ಮುಡಿದಿಹ ಜೋಗಿ !
ಬಂದನು ಬಂದನು ಕಿಂದರಿಜೋಗಿ !
ಹಾರುತ, ತೇಲುತಲಿಳಿದನು ಜೋಗಿ !

ಕೈಕೈಮುಗಿಯುತ ಕಣ್ದೆರೆದು
ಹಿಂದಕೆ ಸರಿಯುತ ಜನರೆಲ್ಲಾ,
ದಾರಿಯ ಬಿಟ್ಟರು ಕಿಂದರಿಜೋಗಿಗೆ !
ಜೋಗಿಯು ಹತ್ತಿದ ಗೌಡನ ಕಟ್ಟೆಯು ;
ಗೌಡನ ಹೃದಯವು ಬಾಯ್ಗೇ ಬಂದಿತು,
ಗಡಗಡ ನಡುಗಿದನು !
ತೊದಳುತ, ಬೆದರುತ, ಕಂಪಿತಕಂಠದಿ
ನೀನಾರೆಂದನು ಜೋಗಿಯ ಕುರಿತು.
ಅದಕಾ ಜೋಗಿಯು ಇಂತೆಂದ ;
ಕೇಳಿದರೆಲ್ಲರು ಬಾಯ್ಬಿಟ್ಟು :
' ಹಿಮಗಿರಿಯಲ್ಲಿಹ ಜೋಗಿಯು ನಾನು ;
ಪರಮೇಶ್ವರನಿಗೆ ಗೆಳೆಯನು ನಾನು ;
ನಿಮ್ಮಾ ಗೋಳನು ಕೇಳಿದ ಶಿವನು
ನನ್ನನ್ನಿಲ್ಲಿಗೆ ಕಳುಹಿದನು.
ಇಲಿಗಳನೆಲ್ಲಾ ಕೊಂದರೆ ಆರು
ಸಾವಿರ ನಾಣ್ಯಗಳೀಯುವೆಯಷ್ಟೆ ? '

೭

ಉಬ್ಬಿತು ! ಉಕ್ಕಿತು ಗೌಡನ ಸಂತಸ !
ಶಹಭಾಸೆಂದರು ಜನರೆಲ್ಲ.
ಗೌಡನು ಜೋಗಿಯ ಕುರಿತಿಂತೆಂದ ;
ಜನರದನೆಲ್ಲಾ ಕೇಳಿದರು :

‘ ಬೇಕಾದುದ ನಾ ಕೊಡುವೆನು ಜೋಗಿ ;
ಆರೇಕಿನ್ನೆರಡಾದರು ಕೊಡುವೆನು.
ಬೇಕಾದುದನೆಲ್ಲವ ನೀ ಕೇಳು ;
ಊರೇ ನಿನ್ನದು ! ನಾ ನಿನ್ನಾಳು !
ಆದರೆ ಒಂದೇ ಸಂದೇಹ—
ಇಲಿಗಳನೋಡಿಪ ಶಕ್ತಿಯು ನಿನಗೆ
ನಿಜವಾಗಿರುವುದು ಹೌದಷ್ಟೆ ? ’
ಜೋಗಿಯು ಹಿಂತಿರುಗೆಲ್ಲರ ನೋಡಿ,
ಕೈಯಾ ಕಿಂದರಿಯನು ಸರಿಮಾಡಿ,
ಗಡ್ಡವ ನೀವುತ ದುರುದುರು ನೋಡಿ
ಗೌಡನ ಕಡೆ ತಿರುಗಿಂತೆಂದ :
‘ ಕೃತಯುಗದೊಳು ಕೈಲಾಸದೊಳು
ಇಲಿಗಳ ಕಾಟವು ಮಿತಿಮೀರೆ,
ಇಲಿಗಳ ಕೊಲ್ಲುವೆನೆಂಬಾ ರೋಷ
ಏರಲು, ಭೈರವನಾದನು ಈಶ !
ಆದರು ಆಗದೆ ಮೂಷಿಕನಾಶ
ನಂದಿಯ ಕಳುಹಿದನೆನ್ನೆಡೆಗೆ :
ಕೊಂದೆನು ಅವುಗಳ ನಾ ಕಡೆಗೆ !
ಕಾಮನ ದಹಿಸಿದ ಹಣೆಗಣ್ಣು
ಮೂಷಿಕರೋಮವ ಸುಡಲಿಲ್ಲ !
ಬೊಮ್ಮನ ಹಳ್ಳಿಯ ಜನರೇ ಕೇಳಿ,
ಮುಂದಿನ ಕಥೆಯನು ಮುಗಿಸುವೆ ಹೇಳಿ :

ದ್ವಾಪರಯುಗದೊಳು ವೈಕುಂಠದೊಳು
ಮೂಷಿಕಸೈನ್ಯಕು ಜಯವಿಜಯರಿಗೂ
ಭೀಕರಕಾಳಗ ಜರುಗಿತು, ಕಡೆಗೆ
ಆ ಜಯವಿಜಯರು ವಿಷ್ಣುವಿನೆಡೆಗೆ
ಓಡುತ ಹೋದರು ಮೊರೆಯಿಡಲು,
ಮೂಷಿಕಸೈನ್ಯಕೆ ವೈಸೋತು !
ಕಡೆಗಾ ವಿಷ್ಣುವೆ ಚಕ್ರವ ಹಿಡಿದು
ಮೂಷಿಕಬಳಗವ ಕೊಲ್ಲುವೆನೆಂದು
ಕದನವನಾಡಲು ಇಲಿಗಳ ಕೂಡೆ
ಮೂರ್ಛೆಗೆ ಸಂದನು ಬಲುಬಳಲಿ !
ವಿಷ್ಣುವೆ ಸೋತನು ಕದನದಲಿ !
ಪೀತಾಂಬರವನು ಹರಿದುವು ಕೆಲವು ;
ಚಕ್ರದ ಹಲ್ಲನು ಮುರಿದುವು ಕೆಲವು !
ಕೌಸ್ತುಭರತ್ನವನಪಹರಿಸಿದುವು !
ಶಂಖವ ಭೂಂ ಭೂಂ ಊದಿದುವು !
ಗದೆಯನ್ನೆಳೆದು ಬಿಸಾಡಿದುವು !
ರಾಕ್ಷಸಕೋಟಿಯ ಕೊಂದಾ ಚಕ್ರವು
ಬರಿದಾಯಿತು ಇಲಿಗಳ ಮುಂದೆ ;
ಕಡೆಗೆನ್ನನು ಕರೆಕಳುಹಿದನು,
ಮೂಷಿಕನಾಶವ ಮಾಡಿದೆನು ! '
' ಕಿಂದರಿಜೋಗಿಯೆ ನಿಲ್ಲಿಸು, ಸಾಕು ;
ನೀ ಗಟ್ಟಿಗನೆಂಬುದು ಗೊತ್ತಾಯ್ತು !

ನಿನ್ನ ಪರಾಕ್ರಮಕಂತ್ಯವೆ ಇಲ್ಲ ;
ಗೆಳೆಯರು ವಿಷ್ಣುಮಹೇಶ್ವರರೆಲ್ಲ.
ನಮ್ಮೂರಿಲಿಗಳ ಸಂಹರಿಸು ;
ಬೇಕಾದುದ ನಾವೀಯುವೆವು ! '
ಎಂದನು ಗೌಡನು ಸಂತಸದಿಂದ ;
ಜನತತಿಗಾದುದು ಅತ್ಯಾನಂದ !

೮

ಮರುಮಾತಾಡದೆ ಕಿಂದರಿಜೋಗಿ
ಕಟ್ಟೆಯನಿಳಿದನು ಬೀದಿಗೆ ಹೋಗಿ.
ಗಡ್ಡವ ನೀವುತ ಸುತ್ತಲು ನೋಡಿ,
ಮಂತ್ರವ ಬಾಯಲಿ ಮಣಮಣ ಹಾಡಿ,
ಕಿಂದರಿ ಬಾರಿಸತೊಡಗಿದನು,
ಜನವನೆ ಮೋಹಿಸಿತಾ ನಾದ !
ಏನಿದು ? ಏನಿದು ? ಗಜಿಬಿಜಿ ಎಲ್ಲಿ ?
ಊರನೆ ಮುಳುಗಿಪ ನಾದಹಿದೆಲ್ಲಿ ?
ಇಲಿಗಳು ! ಇಲಿಗಳು ! ಇಲಿಗಳ ಹಿಂಡು !
ಬಳಬಳ ಬಂದುವು ಇಲಿಗಳ ದಂಡು !
ಅನ್ನದ ಮಡಕೆಯನಗಲಿದುವು !
ಟೋಪಿಯ ಗೂಡನು ತ್ಯಜಿಸಿದುವು !
ಬಂದುವು ಅಂಗಿಯ ಜೇಬನು ಬಿಟ್ಟು,
ಮಕ್ಕಳ ಕಾಲಿನ ಚೀಲವ ಬಿಟ್ಟು.

ಹಾರುತ ಬಂದುವು, ಓಡುತ ಬಂದುವು,
ನೆಗೆಯುತ ಬಂದುವು, ಕುಣಿಯುತ ಬಂದುವು,
ಜೋಗಿಯು ಬಾರಿಸೆ ಕಿಂದರಿಯ.
ಸಣ್ಣಿಲಿ, ದೊಡ್ಡಿಲಿ, ಮೂಗಿಲಿ, ಸುಂಡಿಲಿ,
ಅಣ್ಣಿಲಿ, ತಮ್ಮಿಲಿ, ಅಪ್ಪಿಲಿ, ಅಪ್ಪಿಲಿ,
ಮಾವಿಲಿ, ಭಾವಿಲಿ, ಅಕ್ಕಿಲಿ, ತಂಗಿಲಿ,
ಗಂಡಿಲಿ, ಹೆಣ್ಣಿಲಿ, ಮುದುಕಿಲಿ, ಹುಡುಗಿಲಿ,
ಎಲ್ಲಾ ಬಂದುವು ಓಡೋಡಿ
ಜೋಗಿಯು ಬಾರಿಸೆ ಕಿಂದರಿಯ !
ಬಂದುವು ನಾನಾಬಣ್ಣದ ಇಲಿಗಳು :
ಕೆಂಪಿನ ಇಲಿಗಳು, ಹಳದಿಯ ಇಲಿಗಳು,
ಬೆಳ್ಳಿಲಿ, ಕರಿಯಿಲಿ, ಗಿರಿಯಿಲಿ, ಹೊಲದಿಲಿ,
ಕುಂಕುಮರಾಗದ, ಚಂದನರಾಗದ,
ಹಸುರಿನ ಬಣ್ಣದ, ಪಚ್ಚೆಯ ವರ್ಣದ,
ಸಂಜೆಯ ರಾಗದ, ಗಗನದ ರಾಗದ,
ನಾನಾ ವರ್ಣದ ಇಲಿಗಳು ಬಂದುವು
ಕುಣಿಯುತ ನಲಿಯುತ ಸಂತಸದಿ
ಜೋಗಿಯು ಬಾರಿಸೆ ಕಿಂದರಿಯ !
ನೋಡಿರಿ ! ಕಾಣಿರಿ ! ಬರುತಿಹವಿನ್ನೂ !
ಅಟ್ಟದ ಮೇಲಿಂ ಬರುವುವು ಕೆಲವು !
ಕಣಜದ ಕಡೆಯಿಂ ಬರುವುವು ಕೆಲವು !
ಓಹೋ ! ಬಂದುವು ಹಿಂಡ್ಹಿಂಡಾಗಿ !

ಕುಂಟಲಿ, ಕಿವುಡಿಲಿ, ಹೆಳವಿಲಿ, ಮೂಗಿಲಿ,
ಚೀ ! ಪೀ ! ಎನ್ನುತ ಕೂಗುತಲೋಡಿ
ಗಹಗಹಿಸುತ ನೆರೆ ನಲಿನಲಿದಾಡಿ
ಬಂದಿತು ಮೂಷಿಕಸಂಕುಲವು
ಜೋಗಿಯು ಬಾರಿಸೆ ಕಿಂದರಿಯ !

೯

ಬೊಮ್ಮನಹಳ್ಳಿಯ ಕಿಂದರಿಜೋಗಿ
ಹೊರಟನು ತುಂಗಾನದಿಯೆಡೆಗಾಗಿ.
ಕಿಂದರಿನಾದವು ಗಗನಕ್ಕೇರಿತು,
ಇಲಿಗಳನೆಲ್ಲಾ ಮನಮೋಹಿಸಿತು !
ಕಿಂದರಿಜೋಗಿಯ ಹಿಂಬಾಲಿಸಿದರು
ಜನಗಳು ನೋಡಲು ಕೌತುಕವ ;
ಜೋಗಿಯು ನಡೆದನು, ಇಲಿಗಳು ನಡೆದುವು,
ಸೇರಿದರೆಲ್ಲರು ನದಿಯೆಡೆಯ ;
ಹೊಳೆಯಾ ಮರಳಿನ ಗಡ್ಡೆಯ ತುಂಬಾ
ನೋಡಿದರೆಲ್ಲಿಯು ಮೂಷಿಕಗುಂಪೇ !
ಉಸಿರಾಡದೆ ನಿಂತರು ಜನರೆಲ್ಲಾ
ಮುಂದೇನಾಗುವುದೆಂದಲ್ಲಿ !
ದಿವಿಜರು ಕವಿದರು ಗಗನದಲಿ,
ಹೂಮಳೆ ಕರೆದರು ಹರುಷದಲಿ ;
ದುಂದುಭಿನಾದವ ಮಾಡಿದರು,
ಕಾಣದ ಬೆರಗನು ನೋಡಿದರು !

ಸುತ್ತಲು ನೋಡಿದ ಕಿಂದರಿಜೋಗಿ,
ನಡೆದನು ಹೊಳೆಯಾ ನೀರಿನ ಮೇಲೆ !
ಸೇರಿದ ಜನರೆಲ್ಲರು ಬೆರಗಾಗಿ
'ಜಯಜಯ ಜೋಗೀ !' ಎಂದರು ಕೂಗಿ !
ಇಲಿಗಳು ಒಂದರ ಮೇಲೊಂದು
ಹಿಂಬಾಲಿಸಿದುವು ಜೋಗಿಯನು ;
ಬುಳುಬುಳು ನೀರೊಳು ಮುಳುಗಿದುವೆಲ್ಲಾ
ಹೆಣವಾಗಲ್ಲಿಯೆ ತೇಲಿದುವು.
ಎಲ್ಲಾ ಮುಳುಗಿದುವೆಂದೆನೆ, ಅಲ್ಲಾ !
ರಾವಣನಂದದ ಮೂಷಿಕವೊಂದು
ದೃಢವಾಗೀಜುತ ಸೇರಿತು ದಡವ !

೧೦

ಆಗದು ಜನರಿಗೆ ಈ ಪರಿ ನುಡಿಯಿತು
ಕಿಂದರಿನಾದದ ಅನುಭವವ :
'ಕಿಂದರಿಬಾರಿಸಿದಾಗಲೆ ಎಲ್ಲಿಯು
ಹೋಳಿಗೆವಾಸನೆ ತುಂಬಿದುದು ;
ಯಾರೋ ಹೋಳಿಗೆಮಾಡುವರೆಂದು
ಗೂಡನು ಬಿಟ್ಟೆವು ಹೊರಗಡೆ ಬಂದು.
ನೋಡಲು ಹಲ್ವದ ರಾಶಿಯ ಕಂಡೆವು ;
ವಿಧವಿಧ ತಿಂಡಿಗಳೆಲ್ಲಾ ಜೋಗಿಯ
ಸುತ್ತಲು ಮೆರೆವುದ ನೋಡಿದೆವು !

ಬಲಗಡೆ ದೊಡ್ಡ ಮಿಠಾಯಿಯ ರಾಶಿ,
ಎಡಗಡೆ ಬೆಣ್ಣೆಯ ಮುದ್ದೆಯ ರಾಶಿ,
ತಲೆಯೊಳು ಸಕ್ಕರೆ, ಕೈಯೊಳು ಬೆಲ್ಲ ;
ಬನ್ನಿರಿ, ಬನ್ನಿರಿ, ಎಂದುವು ಎಲ್ಲ !
ಹಿಂಬಾಲಿಸಿದೆವು ನಾವುಗಳು
ತಿಂಡಿಯ ತಿನ್ನುವ ಛಲದಿಂದ ;
ಕಡೆಗೆಲ್ಲವು ಬರಿ ಬಯಲಾಯ್ತು,
ತಿಂಡಿಯೆ ಹರಿಯುವ ಹೊಳೆಯಾಯ್ತು.'
ಜನರೆಲ್ಲರು ಮಾಯೆಗೆ ಬೆರಗಾಗಿ
' ಜಯಜಯ ಜೋಗೀ ! ' ಎಂದರು ಕೂಗಿ !
ಬಿಳಿದಾಯಿತು ಗೌಡನ ಮುಖಮಾತ್ರ
ಹಣಕೊಡಬೇಕಾಯ್ತಲ್ಲಾ ಎಂದು !

೧೧

ಕಿಂದರಿಜೋಗಿಯು ಹಿಂದಕೆ ಬಂದ,
' ಗೌಡನೆ ನಾಣ್ಯಗಳನು ಕೊಡು ' ಎಂದ !
ಗೌಡನು ನೋಡಿದ ಬೆರಗಾಗಿ,
' ಸಾವಿರ ಆರೂ ' ಎಂದನು ಜೋಗಿ !
ಗೌಡನು ನಿಂತನು ತಲೆದೂಗಿ !
' ಕಿಂದರಿಜೋಗಿಯೆ, ಹೇಳುವೆ ಕೇಳು :
ಸಾವಿರ ಆರನು ನಾ ಕೊಡಲಾರೆನು ;
ನೀ ಮಾಡಿದ ಕೆಲಸವು ಹೆಚ್ಚಲ್ಲ,
ಸುಮ್ಮನೆ ಕಿಂದರಿಬಾರಿಸಿದೆ.

ಇಲಿಗಳ ಹೊತ್ತ್ರೆಯು ನೀನೇನು ?
ಅವುಗಳು ತಮ್ಮಿಷ್ಟಕೆ ತಾವೇ
ಬಿದ್ದುವು, ಹೊಳೆಯಲಿ ಮುಳುಗಿದುವು !
ಕೊಡುವೆನು ನೀ ಪಟ್ಟಿಹ ಶ್ರಮಕಾಗಿ
ಕಾಸೈದಾರನು ತೆಗೆದುಕೊ ಜೋಗಿ,
ಪುರಿಗಡಲೆಯ ಕೊಂಡುಕೊ ಹೋಗಿ !'
ಈ ಪರಿ ನುಡಿಯಲು ಗೌಡನು, ಜೋಗಿಯು
ಕಂಗಳ ಕೆರಳಿಸುತಿಂತೆಂದ :
' ಆಡಿದ ಭಾಷೆಯ ತಪ್ಪುವೆಯ ?
ಸಾವಿರ ಆರನು ಕೊಡದಿರೆ ನೀನು
ಮತ್ತೀ ಕಿಂದರಿಬಾರಿಸುವೆ !
ನಿಮ್ಮೀ ಹಳ್ಳಿಯನಾರಿಸುವೆ !'
' ಸಾವಿರವಾರನು ಕೊಡುವರದಾರು ?
ಅಪ್ಪನ ಗಂಟೇ ಹೋಗೋ, ಜೋಗಿ !
ನೀ ಮಾಡುವುದೇನನು ನೋಡುವೆನು ;
ಮಾತಾಡದೆ ತೊಲಗಿಲ್ಲಿಂದ !
ಹೆಚ್ಚಿಗೆ ಮಾತೇನಾದರು ನುಡಿದರೆ
ಕಿಂದರಿಯೊಡಿಸುವೆ, ಗಡ್ಡವ ಸುಡಿಸುವೆ,
ನಿನ್ನೀ ತಲೆಯನು ಬೋಳಿಸುವೆ ;
ಕಿಂದರಿತಂತಿಯು ಹರಿಯುವವರೆಗೂ
ಬಾರಿಸು ಬೇಡೆಂದವರಾರು ?
ಬಲ್ಲೆಯ ನಾನಾರೆಂಬುದನು ?

ಊರ ಪಟೇಲನು, ಹಳ್ಳಿಗೆ ಗೌಡ !
ನಡೆ, ನಡೆ, ಮರುಮಾತಾಡದಿರು !'

೧೨

ಗೌಡನ ನುಡಿಯನು ಕೇಳಿದ ಜೋಗಿಯು
ಕಿಂದರಿಬಾರಿಸತೊಡಗಿದನು.
ನಾದವು ಹಬ್ಬಿತು ಊರೊಳಗೆಲ್ಲಾ,
ಕರೆಯಿತು ಊರಿನ ಹುಡುಗರನೆಲ್ಲಾ !
ಓಡುತ ಬಂದರು ಬಾಲಕರು
ಕೇಳದೆ ಹಿರಿಯರ ಮಾತುಗಳ ;
ಬೊಮ್ಮನಹಳ್ಳಿಯ ಕಿಂದರಿಜೋಗಿ
ಕಿಂದರಿಬಾರಿಸಿದನು ಇಂಪಾಗಿ !
' ಟಿಂಗ್! ಟಿಂಗ್! ಟಿಂಗ್! ಟಿಂಗ್!' ನಾದವ ಕೇಳಿ
ಚಂಗ್! ಚಂಗ್! ನೆಗೆದರು ಬಾಲಕರು
ಕಿಂದರಿಜೋಗಿಯು ಹೊರಟನು ಮುಂದೆ
ಬಾಲಕರೆಲ್ಲರು ನಡೆದರು ಹಿಂದೆ !
ಊರಿನ ಜನರೆಲ್ಲರು ಭಯದಿಂದ
ಎಂದರು ' ಮಕ್ಕಳ ಗೌಡನೆ ಕೊಂದ ;
ಹಾಳಾದೆವು ಗೌಡನ ದೆಸೆಯಿಂದ.'
ಗೌಡನು ಕೂಗಿದ ಹೆದರಿಕೆಯಿಂದ,
ಜೋಗೀ ! ಜೋಗೀ ! ಹಿಂತಿರುಗೆಂದ.
ಕಿಂದರಿಜೋಗಿಯು ನಡೆದನು ಮುಂದೆ,
ಬಾಲರು ಓಡುತ ಹೋದರು ಹಿಂದೆ.

ಕುಂಟರು ಭರದಿಂದೋಡಿದರು !
ಕುರುಡರು ನೋಟವ ನೋಡಿದರು !
ಮೂಗರು ಸವಿಮಾತಾಡಿದರು !
ಕಿವುಡರು ನಾದವ ಕೇಳಿದರು !
ಬಾಲರು ಭರದಿಂದೋಡಿದರು !
ಜನರೆಲ್ಲಾ ಗೋಳಾಡಿದರು !
ಬೊಮ್ಮನಹಳ್ಳಿಯ ಕಿಂದರಿಜೋಗಿ
ಮಕ್ಕಳ ಹೊಳೆಯೊಳಗಿಳಿಸುವನೆಂದು
ಓಡಿದರೆಲ್ಲರು ಜೋಗಿಯ ಹಿಂದೆ.
ಹೊಳೆಯಾ ತೀರವ ಜೋಗಿಯು ಸೇರಿ
ನೀರೊಳಗಿಳಿಯದೆ ಬಲಗಡೆ ತಿರುಗಿ
ಚೌಡಿಯ ಬೆಟ್ಟಕ್ಕಭಿಮುಖನಾದ,
ಭರದಿಂ ಬೇಗನೆ ಮುಂದಕೆ ಹೋದ.
ಬೆಟ್ಟವನವನೇರುವುದಿಲ್ಲೆಂದು
ಹಾರೈಸಿದರಾ ಊರಿನ ಜನರು.
ಬೆಟ್ಟದ ಬುಡವನು ಸೇರಿದ ಜೋಗಿ ;
ನಿಲ್ಲುವನೆಂದೆಲ್ಲಾ ಬಯಸಿದರು !

೧೩

ಏನಿದು ನಿಂತರು ಜನರೆಲ್ಲ,
‘ ಅಯ್ಯೋ ಮಕ್ಕಳೆ ! ’ ಎಂದೆನುತ ?
ಜೋಗಿಯು ಬಾರಿಸೆ ಕಿಂದರಿಯ
ಬಾಗಿಲ ತೆರೆಯಿತು ಆ ಗಿರಿಯು !

ಜೋಗಿಯು ನುಗ್ಗಿದನದರಲ್ಲಿ
ಹಿಂದೆಯೆ ಹೋದರು ಬಾಲಕರು !
ಬೆಟ್ಟವು ಬಾಗಿಲ ಹಾಕಿತು ಬೇಗ ;
ಹಿಂದಕ್ಕುಳಿದವನೊಬ್ಬನೆ ಕುಂಟ.
ಅಲ್ಲಿಗೆ ಬಂದರು ಜನರೋಡಿ,
ಕುಂಟನ ಕಂಡರು ಒಂಟಿಯಲಿ ;
ಕುಂಟನನುಳಿದವರೆಲ್ಲೆಂದು
ಕೇಳಲು ಬೆಟ್ಟವ ತೋರಿದನು.
ಕಂಬನಿಗರೆದರು ಗೋಳಾಡಿದರು,
ಜೋಗಿಯ ಕೂಗುತ ಬಲುಬೇಡಿದರು.
ಬೆಟ್ಟವು ಕೊಟ್ಟಿತು ಮರುದನಿಯು ;
ಭೂಮಿಯು ಹೀರಿತು ಕಂಬನಿಯು.
ಉಳಿದಾ ಕುಂಟನು ಅಳುತಿಂತೆಂದ :
‘ ಅಯ್ಯೋ ಎನಗಿಲ್ಲವರಾನಂದ !
ಜೋಗಿಯು ಕಿಂದರಿಬಾರಿಸೆ ಕಂಡೆವು
ಬಣ್ಣದ ಮನೆಗಳ ಪಟ್ಟಣವ,
ಹಣ್ಣುಗಳುದುರಿದ ತೋಟಗಳ !
ನಾನಾ ಆಟದ ಸಾಮಾನುಗಳ,
ತರತರ ರಾಗದ ಗೊಂಬೆಗಳ ;
ಮಾತಿಗೆ ಮೀರಿದ ಆನಂದಗಳ,
ಕೈಗೇ ಸಿಕ್ಕುವ ಹಕ್ಕಿಗಳ ;

ಜಿಂಕೆಗಳೆಮ್ಮೊಡನಾಡಿದುವಲ್ಲಿ ;
ಮೊಲಗಳು ಕುಳಿತವು ಮೈಮೇಲಲ್ಲಿ !
ಅಯ್ಯೋ ಹೋಯಿತೆ ಆ ನಾಕ !
ಅಯ್ಯೋ ಬಂದಿತೆ ಈ ಲೋಕ !'

೧೪

ಬಂದರು ಎಲ್ಲರು ಬೊಮ್ಮನಹಳ್ಳಿಗೆ
ದುಃಖಾಂಬುಧಿಯೊಳಗೀಜಾಡಿ ;
ಕಂಬನಿಗರೆದರು ಗೋಳಾಡಿ !
ಈಗಾ ಹಳ್ಳಿಯ ಬೀದಿಯಲಾರೂ
ಕಿಂದರಿನಾದವನಾಲಿಸರು ;
ಕಿಂದರಿಜೋಗಿಗಳಲ್ಲಿಗೆ ಬಂದರೆ
ಬೇಕಾದ್ದೆಲ್ಲವನೀಯುವರು !
ಭಾಷೆಯ ಕೊಟ್ಟರೆ, ಮೂರ್ತಿ, ನಾವು
ಮೋಸವ ಮಾಡದೆ ಸಲ್ಲಿಸಬೇಕು.
ಆದುದರಿಂದ, ಮೂರ್ತಿ, ಕೇಳು :
ಸತ್ಯವನೆಂದೂ ತ್ಯಜಿಸದೆ ಬಾಳು !

ಕೆ. ವಿ. ಪುಟ್ಟಪ್ಪ.

# ತಾಯಿ

ತಾಯಿ ದೇವರೆಂದು ವೇದ
ಬಾಯ ಬಿಟ್ಟು ಹೇಳುತಿಹುದು,
ತಾಯಿ ದೇವರೆಂದು ಹಿರಿಯ-
ರೆಲ್ಲರರಿವರು ;
ತಾಯಿ ದೇವರೆಂದು ತಿಳಿದ-
ರೆಲ್ಲರೊರೆವರು.

ಮನೆಯೆ ಮೊದಲ ಪಾಠಶಾಲೆ,
ಜನನಿ ತಾನೆ ಮೊದಲ ಗುರುವು.
ಜನನಿಯಿಂದ ಪಾಠ ಕಲಿತ
ಜನರು ಧನ್ಯರು ;
ಘನತೆಯಿಂದಲವರು ಬಾಳ್ವ-
ರೆನುತ ನುಡಿವರು.

ಹೊಟ್ಟೆಯಲ್ಲಿ ಹೊತ್ತು ತಾಯಿ
ಬೆಟ್ಟದಷ್ಟು ಕಷ್ಟವನ್ನು
ಗಟ್ಟಿಮನದಿ ತಾಳ್ವಳಲ್ತೆ ;
ಕಂದಗೋಸುಗ
ಬಿಟ್ಟು ಸುಖವ, ತಾಳ್ವಳವಳು
ಬಂದ ದುಃಖವ.

ಕಂದ ಬಳಲಿ ಬಂದನೆಂದು
ನೊಂದುಕೊಂಡು ಬೇಗ ಮಮತೆ-
ಯಿಂದ ನಗುತ ನುಡಿಸುತಮೃತ-
ಬಿಂದುವೆರೆವಳು ;
ಬೆಂದ ಮನದ ಬೇಗೆಯಳಿಸು-
ತಂದಗೊಳಿಪಳು.

ಎನ್ನ ಚಿನ್ನ ತಣ್ಣಗಿರಲಿ,
ಎನ್ನ ರನ್ನ ಸುಖವ ಪಡೆಯ-
ಲೆನ್ನ ಮುದ್ದು ಕಂದ ಕೀರ್ತಿ-
ವಡೆದು ಬಾಳಲಿ,'
ಎನ್ನುತಾಶಿಸುವಳು ತಾಯಿ,
ಒಡಲ ಮರುಕದಿ.

ಪಡೆದ ತಾಯಿ, ಜನುಮವಿತ್ತ
ಪೊಡವಿಯೆಂಬಿವೆರಡು ಸಗ್ಗ-
ಪಡೆಗೆ ಮಿಗಿಲು ; ಸರ್ವಸಾಧು-
ವರರು ಜಗದಲಿ
ಬಿಡುವರೆಲ್ಲವನ್ನಿವಕ್ಕೆ
ಪರಮಹರ್ಷದಿ.

ತಾಯ ಮಾತಿಗಾಗಿ ರಾಮ
ರಾಯತನವ ತೊರೆದು ನಡೆದ,

ತಾಯ ಸೆರೆಯ ಬಿಡಿಸೆ ಕೃಷ್ಣ
ಗೊಲ್ಲನಾದನು ;
ತಾಯ ಮಾತ ನಡಸೆ ಕರ್ಣ
ಬಿಲ್ಲ ತೊರೆದನು.

ಮಾತೆಗಾಗಿ—ತಮ್ಮದೇಶ-
ಮಾತೆಗಾಗಿ—ಸಕಲರಾಜ-
ಪುತ್ರರಸುವ ತೊರೆದರಂದು
ರಣದ ಕಣದಲಿ ;
ಖ್ಯಾತಿವೆತ್ತು ಮೆರೆವರಿಂದು
ಮಣಿಗಳಂದದಿ.

ರನ್ನಗದ್ದುಗೆಯಲಿ ಮಾತೆ
ಮುನ್ನ ನೆಲಸೆ ವಿಜಯದಿಂದ
ಧನ್ಯರವಳ ಹಿರಿಯ ಹೆಸರ
ವಿಶದಗೊಳಿಸುತ,
ಕನ್ನಡಿಗ ಮರಾಟರಮಿತ-
ಯಶವ ತಳೆದರು.

ಅವರ ಹೆಸರನೆಲ್ಲ ಹೇಳು-
ತವರ ಕಥೆಯನೆಲ್ಲ ಕೇಳು-
ತವರ ಕುಲದಿ ಹುಟ್ಟಿ ಹೆಮ್ಮೆ-
ಪಡನದಾವನು ?

ಅವರ ಸೇವಿಸಲ್ಕೆ ತವಕ-
ಪಡನದಾವನು ?

ಧರಣಿಗೆಲ್ಲ ತನ್ನ ಬೆಳಕ
ಹರಡಿ ಮೆರೆದ ಭರತಮಾತೆ
ಹೆರರ ಸೇವೆಯಿಂದ ಕಂದಿ
ಕುಂದಿಹೋದಳು ;
ತೊರೆದರೆನ್ನ ಮಕ್ಕಳಿಂದು
ನೊಂದುಕೊಳ್ವಳು.

ನಮ್ಮ ತಾಯ ಗೋಳ ನೋಡಿ
ಸುಮ್ಮನಿಹುದು ಸರಿಯೆ ನಾವು,
ನಮ್ಮ ಸೋದರರ್ಕಳೊಡನೆ
ಕದನಗೈಯುತ ?
ಅಮ್ಮನನ್ನು ಮರೆತು ಸೊಕ್ಕಿ
ಸದರವಾಡುತ ?

ಬನ್ನಿ ! ತಾಯಿಗೆರಗಿ ಬೇಗ
ಮುನ್ನ ಗೈದ ತಪ್ಪನೆಲ್ಲ
ಮನ್ನಿಸೆಂದು ಕೈಯ ಮುಗಿದು
ಬೇಡಿಕೊಳ್ಳುವ ;
ಬನ್ನಿ ! ಭಾರತೀಯಕ್ಯತೆಯ
ಮಾಡಿ ತೋರುವ.

ಎಲ್. ಗುಂಡಪ್ಪ.

# ದೇಶಭಕ್ತಿ

ಏನು, ಉಸಿರಾಡುವನೆ ಕಲ್ಲೆದೆಯ ನರನು :
ನನ್ನದೀ ನಾಡು, ನನ್ನನು ಹೆತ್ತ ನಾಡು !
ಎನುತೊಂದು ಬಾರಿಯೂ ನೆನೆದುಬ್ಬದವನು ?
ಹೆರರ, ಕಾಣದ, ದೇಶದಲಿ ತೊಳಲಿ ಕೊನೆಗೆ
ಮನೆಯ ಕಡೆ ಹೆಜ್ಜೆಯನು ತಿರುಗಿಕ್ಕುವಾಗ
ಎದೆಯೊಳಗೆ ಬಿಸಿನೆತ್ತರುಕ್ಕದಿರುವವನು ?
ಇರುವನೇ ಅಂಥವನು ! ಹೋಗವನನರಸು.
ಕವಿಯ ಸವಿನುಡಿಯವನ ಸೋಂಕಿಗಂಜುವುದು.
ಯಾವ ಬಿರುದೇ ಇರಲಿ, ಹಿರಿಯ ಹೆಸರಿರಲಿ,
ಬಯಕೆ ಬೇಡುವ ಭಾಗ್ಯವೆಲ್ಲ ತನಗಿರಲಿ ;
ಆ ಬಿರುದು, ಆ ಹೆಸರು, ಆ ಭಾಗ್ಯವೇಕೆ ?
ತನ್ನಿರವಿನೊಳೆ ತಾನು ಮೈಮರೆತ ಪಾಪಿ,
ಬಾಳುವಾಗಿಲ್ಲಿ ಬಲಿಗೊಟ್ಟು ಕೀರ್ತಿಯನು,
ಮರಳಿ ಸಾಯುತ ಮುಂದೆ ಹೊರಳುವನು ಕೆಳಗೆ,
ತಾನೊಗೆದುಬಂದ ಹೊಲೆಗೆಟ್ಟ ಧೂಳೊಳಗೆ ;
ಹಾಡಿ ಹೊಗಳುವರಿಲ್ಲ, ಗೋಳಿಡುವರಿಲ್ಲ !

ತೀ. ನಂ. ಶ್ರೀಕಂಠಯ್ಯ.

# ದೋರಸಮುದ್ರ

ವಿಜಯನಗರಕೆ ಮುನ್ನ ಹಿರಿಯ ಕನ್ನಡನಾಡ
ಗುಡಿಯ ಮೆರೆಸಿದ ಹಿರಿಯ ನಗರಿ ದೋರಸಮುದ್ರ.
ಬಿಲ್ಲಾಳ ಪಡೆಗಳಲಿ ಬಲ್ಲಿದರ ಹೊಯ್ಸಳರ-
ನುಲ್ಲಸದಿ ಕಾಪಿಟ್ಟ ಕೋಟೆ, ಲೋಕವನೆಲ್ಲ
ಬೆರಗುವಡಿಸಿದ ಗುಡಿಯ ಕಟ್ಟಿದಾ ಶಿಲ್ಪಿಗಳ
ತೌರೂರು, ಮತತತ್ವಗಳ ಸಾರಬಂದವರ
ವಾದಭೂಮಿಯು, ಮನದ ಬೇಗೆಯನು ನಂದಿಸಿದ
ಕವಿವರರ ನೆಲೆವನೆಯು, ಸಿರಿಗದರಮನೆಯು.

ಅಂದು ಸಿರಿಸರಸತಿಯರರಮನೆಯದೆಂಬಂತು
ಮೆರೆದ ದೋರಸಮುದ್ರರಾಜಧಾನಿಯದೆಲ್ಲಿ ?
ಬಿಲ್ಲಾಳ ಪಡೆಯಲ್ಲಿ ? ಬಲ್ಲಾಳ ದೊರೆಯೆಲ್ಲಿ ?
ಕೋಟೆಕೊತ್ತಳವೆಲ್ಲಿ ? ಗುಡಿಯೆಲ್ಲಿ ? ರೂವಾರಿ-
ಜನರೆಲ್ಲಿ ? ತಾತ್ವಿಕರ, ಕವಿಗಣದ ಬೀಡೆಲ್ಲಿ ?
ಹಾಳುಮನೆಗಳ ಹಳೆಯಬೀಡಿನೆಡೆಯಲ್ಲಿ !!

ಎಲ್. ಗುಂಡಪ್ಪ

# ಹೋದ ಬಾಳ ಬೆಳಕು

೧

ಸದ್ದೆ ಇಲ್ಲದಿರುಳಿನಲ್ಲಿ
ನಿದ್ದೆಹೆಣ್ಣು ಬಂದು ಎನ್ನ
ಮುಗ್ಧನೇತ್ರಗಳಿಗೆ ತನ್ನ
ಮುದ್ದುಮುತ್ತ ಕೊಡುವ ಮುನ್ನ,
ಲೋಲಬಾಲೆ ನೆನಪು ಬಂದು,
ಹೋದ ಬಾಳ ಬೆಳಕ ತಂದು,
ಚಿತ್ತಭಿತ್ತಿಯಲ್ಲಿ ನಿಂದು,
ನಲಿದು ಕುಣಿದು ಹಿಂದುಮುಂದು,
ನಲ್ಮೆದೋರಿ ಮೆರೆವಳು ;
ಒಲ್ಮೆದೋರಿ ಕರೆವಳು !
ಅಂದಿನಾಟ,
ಚೆಂದದೂಟ,
ಅಂದಿನೋಟ,
ಕೂಟ, ನೋಟ,
ಕಣ್ಣ ನೀರು, ಮಂದಹಾಸ,
ಅಣ್ಣುಗತನದ ಹುಚ್ಚುವೇಷ,
ಅಂದು ಮೆರೆದ ಬೇಟವು ;
ಅಂದು ಹೊಳೆದು
ಒಲಿದು ನಲಿದೂ,

ಇಂದು ಮಣ್ಣು
ಕವಿದ ಕಣ್ಣು ;
ಅಂದು ಹರುಷದಿಂದ ನಡೆದು
ಇಂದು ಶೋಕದರೆಗೆ ಬಡಿದು,
ಒಡೆದ ಎದೆಯು ಕೂಟವು !

ಸದ್ದೆ ಇಲ್ಲದಿರುಳೊಳಿಂತು
ನಿದ್ದೆಹೆಣ್ಣು ಬಂದು ಎನ್ನ
ಮುಗ್ಧನೇತ್ರಗಳಿಗೆ ತನ್ನ
ಮುದ್ದುಮುತ್ತ ಕೊಡುವ ಮುನ್ನ
ಖಿನ್ನವದನೆ ನೆನಪು ಬಂದು
ಹೋದ ಬಾಳ ಬೆಳಕ ತಂದು,
ಚಿತ್ತಭಿತ್ತಿಯಲ್ಲಿ ನಿಂದು,
ನಲಿದು ಕುಣಿದು ಹಿಂದುಮುಂದು
ನಲ್ಮೆದೋರಿ ಮೆರೆವಳು ;
ಒಲ್ಮೆದೋರಿ ಕರೆವಳು !

೨

ಹಗಲು ಇರುಳು ಆಟವಾಡಿ,
ದಿನವು ಮುದ್ದುಮಾತನಾಡಿ,
ಒಂದೆ ಜೀವದುಸಿರನೆಳೆದು,
ಒಂದೆ ಬಾಳಿನಲ್ಲಿ ಬೆಳೆದು,

ಮಾಗಿಚಳಿಯು ಗಾಳಿ ಬೀಸೆ,
ಮಾಗಿ, ಎಲೆಗಳೆಲ್ಲ ಹಳದಿ-
ಯಾಗಿ ಭೂಮಿಗುದುರುವಂತೆ,
ಸಾಗಿ ಉದುರಿ ಮಾಯವಾದ
　　ಗೆಳೆಯರನ್ನು ನೆನೆಯಲು,
　　ಎಳೆಯರನ್ನು ನೆನೆಯಲು ;
　　　　ಬೆಳಕ ಕಳೆದು
　　　　ಸೊಬಗನುಳಿದು
　　　　ಕತ್ತಲಾಗಿ
　　　　ಬತ್ತಲಾಗಿ
ತೋರಣಂಗಳಲ್ಲಿ ಕೋದ
ತಳಿರು ಹೂವು ಬಾಡಿಹೋದ
　　ಬಿಟ್ಟ ಮದುವೆಮನೆಯೊಳು,
　　　　ಜೊತೆಯು ನೀಗಿ
　　　　ಒಂಟಿಯಾಗಿ
　　　　ಬೇಸರಿಂದ
　　　　ಭೀತಿಯಿಂದ,
ಪಾಳುಬಿದ್ದ ಮನೆಯು, ಬಾಡಿ
ನೇತುಬಿದ್ದ ಸೊಬಗ ನೋಡಿ
　　ಅಳುವ ನೆಂಟನಾಗುವೆ !

ಸದ್ದೆ ಇಲ್ಲದಿರುಳೊಳಿಂತು
ನಿದ್ದೆಹೆಣ್ಣು ಬಂದು ಎನ್ನ
ಮುಗ್ಧನೇತ್ರಗಳಿಗೆ ತನ್ನ
ಮುದ್ದುಮುತ್ತ ಕೊಡುವ ಮುನ್ನ
ಖಿನ್ನವದನೆ ನೆನಪು ಬಂದು,
ಹೋದ ಬಾಳ ಬೆಳಕ ತಂದು,
ಚಿತ್ತಭಿತ್ತಿಯಲ್ಲಿ ನಿಂದು,
ನಲಿದು ಕುಣಿದು ಹಿಂದುಮುಂದು,
ನಲ್ಮೆದೋರಿ ಮೆರೆವಳು ;
ಒಲ್ಮೆದೋರಿ ಕರೆವಳು.

ಕೆ. ವಿ. ಪುಟ್ಟಪ್ಪ.

# ಚಿತ್ತಕ್ಷೋಭೆ

ಎಲರಿಲ್ಲ ಬಾನಲ್ಲಿ,
ಅಲೆಯಿಲ್ಲ ಕೆರೆಯಲ್ಲಿ,
ಎಲೆಯಲುಗದೀ ಕರೆಯ ಮರಗಳಲ್ಲಿ.
ಹೊಲಸು ಬಾಳಿನ ಹಲವು
ಕೆಲಸದಬ್ಬರವಿಲ್ಲ.
ಕಲಕುತಿದೆ ನನ್ನ ಮನವೇತಕಿಂತು ?

ಬೇಸತ್ತೆನೀ ಜಗಕೆ ;
ರೋಸಿದೆನು ಬಾಳಿಕೆಗೆ ;
ಆಸೆಗಳ ತೊಡಕುಗಳಿಗಲಸಿ ಬಂದೆ.
ಕುದಿಕುದಿವ ಮನದಳಲು
ಬದುಕಬೇಡೆನ್ನಿಸಿತು ;
ಹದಗಾಣದಲೆಯುವೆನು ಶಮವ ಬಯಸಿ

ಎಲ್ಲಿ ದೊರೆವುದು ಶಾಂತಿ ?
ಎಲ್ಲಿ ತನುವನು ಕುದಿಪ
ಬಲ್ಲಿದಹ ಮನದಳಲು ತಂಪೆನಿಪುದು ?
ನಿಲ್ಲುವೆನು ಕೂರುವೆನು ;
ತಲ್ಲಣಿಸಿ ಸುಯ್ಯುವೆನು ;
ಎಲ್ಲಿ ಹೋಗಲಿ ? ಸುಖವು ಕಾಣದಲ್ಲ !

ಹಗಲ ಹಗರಣದುರಿಯು
ಮಿಗೆ ಸುಡಲು ಮನವನ್ನು
ಬಿಗಿದ ನಿದ್ದೆಯೊಳದನು ಮರೆವೆನೆಂದು,
ರಾತ್ರಿಯಲಿ ಕಣ್ಮುಚ್ಚ-
ಲೆತ್ತ ಪೋಪುದೊ ನಿದ್ದೆ !
ಹೊತ್ತ ನೂಕುವೆನೆಂತೊ ! ಹೊರಳಿ ನರಳಿ.

ಎಲೆ ಗಾಳಿ, ಕೆರೆ, ಮರವೆ—
ಅಲುಗದಿರುವಿರದೇಕೆ ?
ಮಲಿತು ನಿದ್ರಿಸುವಿರಾ ? ನುಡಿಯಿರೆನಗೆ.
ಇವರನೇತಕೆ ನುಡಿಸಿ
ಬವಣೆಗೊಳಿಪೆನೊ, ನಾನು ?
ತವಿಪ ನನ್ನೆದೆಯುಳಲನರಿಯರಿವರು.

ನಿಂತು ಹೋರದೆ ನಾನ-
ದಿಂತೇಕೆ ಬಳಲುವೆನೊ ?
ಚಿಂತಿಸುತ ದೈನ್ಯದಲಿ ಬಾಗುತಿಹೆನೋ ?
ಸಂತಸವು ನನಗಿಲ್ಲ-
ವಿಂತಿದುವೆ ನಿಶ್ಚಯವು.
ಎಂತಾದರೂ ಬರಲಿ— ಎನ್ನನೇಕೋ ?

ಸುಡುವ ನನ್ನೆದೆಯುರಿಯೆ,
ತಡೆವೆಯೇತಕೆ ? ಬೇಗ
ಸುಡು ನನ್ನ ಭಾರವಹ ದೇಹವನ್ನು.

ನಡುನಡುಗದಿರು ದೇಹ,
ಬಿಡುಗಡೆಯು ಬಂದಿಹುದು—
ಕಡುಬಳಲಿ ನೊಂದಿರುವ ನಿನಗೆ ಶಾಂತಿ.

ಬೀಸು, ಹೊತ್ತಿಸು ಕಿಚ್ಚ,
ಬೀಸೆಲರೆ ತಡೆಯದಿರು ;
ಆಸೆಯನು ತೋರದಿರು, ಬೇಡ ಬದುಕು.
ಕುದಿ ಕದಡಿ ಕುದಿ ಕೆರೆಯೆ,
ಕೆದಕೆನ್ನ ಬೆಂಕಿಯನು,
ಬದುಕಲಾರದ ತನುವು ಹೋಗಿಬಿಡಲಿ.

ಯಾರ ಮಾನಸದಳಲ
ಸೇರುರಿಯ ಕಿಡಿಗಳೋ
ತಾರಕೆಗಳಾ ನೀವು ? ಸುಡುವಿರೇಕೆ ?
ನಿಮ್ಮೆಡೆಯ ಬಾನಿನಲಿ
ಹೊಮ್ಮುತಿಹ ಕರ್ಬೊಗೆಯು
ದುಮ್ಮಾನದಾರ ಮನದುರಿಯ ಹೊಗೆಯೊ ?

ಎಡೆಗೊಂಡು ನನ್ನೊಳಗೆ
ಕಡುಮಬ್ಬು ಕವಿಯುತಿದೆ
ಅಡಿಗಡಿಗೆ ಹಬ್ಬುತಿದೆ ಮನವನೆಲ್ಲ.
ಮರೆಯುತಿದೆ ನನ್ನೊಡಲ
ಬಿರುದುಗುಡದಾತಂಕ,
ಅರಿವಳಿದು ಹೋಗುತಿದೆ, ಹೋಗಲದುವೆ.

ತಿರುಗಿ ಬರುತಿದೆ ನೆನಪು,
ಹರಿಣವನು ಬೆಂಬಿಡದೆ
ಸರಸರನೆ ಬರುತಿರುವ ಬಾಣದಂತೆ.
ಮರುಕೊಳಿಸಿ ಮನದಳಲು
ಹಿರಿದಾಗಿ ತೋರುತಿದೆ.
ಬರಿಯಾಸೆ ನನಗಿಹುದು, ಕಷ್ಟ ಬಿಡದು.

ಎ. ಕೆ. ಪುಟ್ಟರಾಮು

# ದೂರು

ಏನಿದೇನನ್ಯಾಯ ಸದ್ಧರ್ಮಮೂರ್ತಿ ?
ಏನಿದೀ ಚಿಣ್ಣಾಟ ಹತಸಜ್ಜನಾರ್ತಿ ?
ನಿಷ್ಪಕ್ಷಪಾತಿಯಲ್ಲವೆ ನಿನ್ನ ಕೀರ್ತಿ ?
ಏನು ? ಸೋದರರೊಡನೆ ಕಡಿದಾಡಬಹುದೆ ?
ಏನು ? ಬಾಂಧವರೊಡನೆ ಹೊಡೆದಾಡಬಹುದೆ ?
ಇಂತಿರಲು ಸಂತಸದಿ ನಲಿದಾಡಲಹುದೆ ?
ನೆರೆಯ ಜನರೆಲ್ಲರನು ಪ್ರೀತಿಸಲು ತಪ್ಪೇ ?
ಕೊರಗುವರ ಕಂಡಯ್ಯೊ ಎನಲದುವೆ ತಪ್ಪೇ ?
ನೆರವಾಗುತಿರಲವರಿಗದು ದೊಡ್ಡ ತಪ್ಪೇ ?

ಹಾ ! ದೇವ ! ತಮ್ಮಿರವನರಿಯದೆಯೆ ವ್ಯೆಮರೆತು,
ಸೋದರರ ಪೀಡಿಸುತ ಮಲೆತ ಬಾಂಧವಜನಕೆ
ಅರಿತ ನೀತಿಯನೊರೆಯಲದು ದೊಡ್ಡ ತಪ್ಪೇ ?
ಹಿರಿಯರಾಚರಣೆಗಳ—ಸದ್ಧರ್ಮಸರಣಿಗಳ—
ತೊರೆದವರ ಕಟ್ಟಳೆಯ ಮುರಿದು, ಮನಬಂದಂತೆ
ಮೆರೆದು, ಹಿರಿಯರ ಹೆಸರನುಳಿಸುವರು ನಾವೆಂದು
ಅರಿಯದರ ಬಾಯ್ಬಡಿವ ಬಡಿವಾರಗಾರರಿಗೆ
ಮಣಿಯದಿರಲವರಂತೆ ಕುಣಿಯದಿರಲವರೊಡನೆ
ಸೆಣಿಸಿ ಸತ್ಯವನವರಿಗರುಹಲದೆ ತಪ್ಪೇ ?
ನೆರೆಯ ಜನರೈಸಿರಿಯ ಕಂಡಸೂಯೆಯ ಪಡುತ,
ಪರಿಪರಿಯ ಕಿರುಕುಳವ ತಂದೊಡ್ಡಿ ಪೀಡಿಸುತ,

ನೆರೆ ನಲಿವ ದುರುಳರನು ಜರೆಯಲದು ತಪ್ಪೇ ?
ಒಮ್ಮನದಿ ಸೊಗಬಡುತ ಬಾಳ್ವ ಸೋದರ್ಯರನು,
ನೆಮ್ಮದಿಯ ತಳೆದೊಲ್ದು ನಲಿವ ದಂಪತಿಗಳನು,
ಕಂಡು ಸೈರಿಸದಿರಲು, ಕುಟಿಲನೀತಿಯ ಬೀರಿ,
ಅವರನಗಲಿಸಿ, ಧನ್ಯರಾವೆಂದು ಗರ್ವಿಸುವ
ಮನೆಹಾಳರನು ಹಳಿಯುತವರೆಡೆಗೆ ಸುಳಿಯದಿರ-
ಲದು ದೊಡ್ಡ ತಪ್ಪೇ ?

ದೇವ, ಹೇಳಿಂಥವರ ಹಳಿಯಲದು ತಪ್ಪೇ ?
ಇಂಥವರ ಬತ್ತಳಿಕೆಯಕ್ಷಯವು, ದೇವ,
ಚಾಡಿಚೋದಿಗಳಿವರ ಬಾಣಗಳು, ದೇವ,
ಈ ಬಾಣಗಳ ಬಾಯಿ ಬಲು ತೀಕ್ಷ್ಣ, ದೇವ,
ಇವರಿಗೀ ನಡತೆಯೇ ದಿನಚರಿಯು, ದೇವ.
ಅಕ್ಷಯಗಳೆನಿಸುವೀ ಬತ್ತಳಿಕೆಗಳ ಧರಿಸಿ,
ಸದ್ಧರ್ಮ ಸತ್ಯ ಸೌಭ್ರಾತ್ರ ಸೌಖ್ಯಗಳೆಂಬ
ಸೌಮ್ಯಮೃಗಗಳ ಬೇಟೆಯಾಡಲೋಸುಗ ಧರೆಯೊ
ಳಿತ್ತ ನೋಡೆ ಕಿರಾತಪಡೆ ನುತ್ತುತಿಹುದು ;
ಸೌಮ್ಯಮೃಗಗಳ ಬಳಗವನು ಮುತ್ತುತಿಹುದು ;
ಹಾ ! ಕಷ್ಟ ! ಮೃಗಶರೀರವು ಕೆತ್ತುತಿಹುದು.
ಈ ಕಿರಾತರ ಪಡೆಯ ನಡುವೆ ಸಿಕ್ಕಿದೆನು,
ಕ್ರೂರಕೃತ್ಯವ ತಡೆಯೆ ಕೈಯನೆತ್ತಿದೆನು,
ತಡೆಯಲಾರದೆ ನುಗ್ಗುನುಚ್ಚಾದೆನು.

ಇಂಥವರ ಜೊತೆಗೆ ಸೇರದುದೆನ್ನ ತಪ್ಪೇ ?
ಇಂಥವರನೆದುರಿಸುತ ನಿಂದುದೇ ತಪ್ಪೇ ?
ಇಂಥವರ ಕಾರ್ಯಗಳು, ಹೇಳು, ನಿನಗೊಪ್ಪೇ ?

"ನಮ್ಮ ಹಿರಿಯರ ಕೀರ್ತಿ ಹಿರಿದಲ್ಲವೇ ?
ನಮ್ಮ ನಾಡಿನ ಮಹಿಮೆ ಹಿರಿದಲ್ಲವೇ ?
ಅದನು ಪಡೆಯುವ ಭಾಗ್ಯ ನಮಗಿಲ್ಲವೇ ?
ಹಿಂದಿನಾ ಮಹಿಮೆಗಳ ಮರೆತೆವಲ್ಲಾ !
ಹಿರಿಯರಾಚರಣೆಗಳ ತೊರೆದೆವಲ್ಲಾ !
ಪರರ ನೋಡುತ ಮರುಳರಾದೆವಲ್ಲಾ !
ನಾವಿಂದು ತಿರುಕರಂತಾದೆವಲ್ಲಾ !
ಎಣೆಯಿಲ್ಲ ನಮಗೆಂದು ಮೆರೆವೆವಲ್ಲಾ !
ಎಲ್ಲ ಲೋಕದ ನಗೆಗೆ ಗುರಿಯಾದೆವಲ್ಲಾ !"
ಎಂದಿಂತು ಹಲುಹಲುಬಿ, ಗೋಳಾಡಿ, ನಮ್ಮವರ
ಬಳಿಸಾರಿ, ಹಗೆತನವ ಬಿಡಿರೆಂದು, ಪೂರ್ವಜರ
ಧರ್ಮವನು ಬಿಡದೆ ಕಾಪಿಡಿರೆಂದು, ಹಿತದಿಂದ
ತಾಯ್ನಾಡ ತಾಯ್ನುಡಿಯ ಸೇವೆಗೋಸುಗ ನೀಚ-
ಸ್ವಾರ್ಥವನು ಬಿಡಿರೆಂದು, ಸೌಹಾರ್ದದಿಂದೊಂದು-
ಗೂಡಿ, ಹಿಂದಿನ ನಮ್ಮ ಘನತೆಯನು ತಹುದೆಂದು,
ಕೈಮುಗಿದು ಬೇಡಿದೆನು ; ಕಣ್ಣೀರ ಸುರಿಸಿದೆನು ;
ದಮ್ಮಯ್ಯ ಎಂದು ಪಾದಕೆ ಬಿದ್ದು ಬೇಡಿದೆನು.

ಏನಾದರೇನೆನ್ನ ಕಣ್ಣೆತ್ತಿ ನೋಡದೆಯೆ
ಧಿಕ್ಕರಿಸಿ ಕಳುಹಿದರು, ಬೈಗುಳದ ಸುರಿಮಳೆಯು
ಸುರಿಸಿದರು ; ಬಗಬಗೆಯ ಕೋಟಲೆಯ ತಂದೊಡ್ಡಿ
ಪೀಡಿಸುತ ಬಲುಹಿಗ್ಗಿ ನಲಿಯುತಿಹರು !

ಇದರೊಳೆನ್ನಪರಾಧವೇನು, ದೇವ ?
ತಪ್ಪುಂಟೆ ? ನಾನರಿಯೆ ; ತಿಳಿಸು, ದೇವ.
ತಪ್ಪಿಲ್ಲದಿರೆ ಜಯವದೇಕಿಲ್ಲ, ದೇವ ?
ತಪ್ಪ ಮನ್ನಿಸಿ ದಾರಿದೋರು ದೇವ.
ಸದ್ಬುದ್ಧಿಯನು ನೀಡಿ ಸಲಹು ದೇವ.

ಎಲ್. ಗುಂಡಪ್ಪ.

# ನನ್ನ ನಾಯಿ

ಹೆರರ ನೋವಿಗೆ ' ಅಯ್ಯೊ ' ಎಂದು
ಮರುಕತೋರಲು ಕರುಣೆ ; ಒಲವೆ ?
ಒರಿಯ ಸುಖದಿರವೆನ್ನದೆನ್ನುವ
ಅರಿವು ಒಲಿದವಗಿರುವುದೆ ?

ಜನುಮದೊಂದಿಗೆ ಜೊತೆಯು ಕೂಡಿ
ಕೊನೆಯವರೆಗೂ ಬೆನ್ನ ಬಿಡದ
ಜನುಮದುನ್ನತಿ ಕುಲದ ಹೆಮ್ಮೆಯು
ಕಟ್ಟು ಕಳೆವುದೆ ಕರುಣೆಯು ?

ಕೊಳದ ಕರೆ ಬಳಿ ಅಂದು ಮರುಗಿದೆ,
ಸುಳಿದ ನೋವಿನ ಅಳುವ ಕೇಳಿ ;
ಬೆಳೆದ ಇರುಳೊಳು ದನಿಯನರಸಿ,
ಮನದೊಳಳುಕುತ, ನಡೆದೆನು.

ಮುಗಿಲ ಬೆಳ್ಳಿಯ ಪೊರೆಯು ಹೊದೆದು
ಸೊಗಸುಕನಸನು ಕಾಣುವಂದದಿ
ನಗುವ ಚಂದ್ರನ ಬೆಳಕಿನೊಳಗೆ
ಕಂಡೆ ತಬ್ಬಲಿ ಮರಿಯನು.

ತಾಯಿ ಸತ್ತರು ಮೊಲೆಯ ಬಿಡದಾ
ನಾಯ ಮರಿಯ ಗೋಳ ಕಂಡೂ
ಮೈಯ ಮುಟ್ಟಲು ತಡೆದುದಂದು
ಜಾತಿ ಹೆಚ್ಚಿನ ಹೆಮ್ಮೆಯು.

ಕೊರೆವ ಚಳಿಯೊಳು ದಿಕ್ಕುಗಾಣದ
ಮರಿಯ ತೊರೆಯಲು ಮನವು ಬಹುದೆ !
ಕೊರಲೊಳಿಟ್ಟೆನು ಬಳ್ಳಿಕುಣಿಕೆಯ,
ಮನೆಗೆ ನಡೆಸಿದೆ ಮೆಲ್ಲನೆ.

ಅಂದು ಮಕ್ಕಳ ಹರುಷ ಮೀರಿತು,
ಮುಂದೆ ಕುಣಿದರು ಕೈಯ ತಟ್ಟಿ ;
ಕಂದನಂದದಿ ಅಂದು ಮೊದಲು
ಮರಿಯ ಸಾಕಿದೆವೆಲ್ಲರು.

ಹಾಲು ಅನ್ನವನುಣಿಸಿ ನಲಿದೆವು,
ಮೇಲುತಿಂಡಿಗಳೆಲ್ಲವಿತ್ತೆವು ;
ಮೈಲಿಗೆಯ ಭಯದಿಂದ ಮೈಯನು
ಮುಟ್ಟಗೊಡಿಸೆವು ಆದರೂ.

ಮರಿಯು ನಮ್ಮಯ ಬಿಂಕವರಿತು
ಹೊರಗೆ ನಿಲುವುದು, ಹೊಸಿಲ ದಾಟದು.
ಹಿರಿಯತನದ ಹೆಮ್ಮೆಗಡಲು
ಉರುಳಿತೆಮ್ಮಯ ಮಧ್ಯದಿ.

ಆರು ತಿಂಗಳ ಕಳಿದವಿಂತು.
ಊರಿ ಮೆಚ್ಚಿದ ಮರಿಯನೊಂದು
ಇರುಳೊಳೊಯ್ದನು ಕಳ್ಳನದನು,
ಮನೆಯ ಮಕ್ಕಳ ಮುದ್ದನು.

ಎದ್ದು ಹುಡುಗರು ಮರಿಯ ಕಾಣದೆ
ಬಿದ್ದು ಬೀಳುತಲೋಡಿ ಬಂದು,
' ಕದ್ದರೇನೋ ? ಮರಿಯ ಕಾಣೆವು.'
ಎಂದು ಕಂಬನಿಗರೆದರು.

ಕೇರಿಕೇರಿಗೆ ಜನರನಟ್ಟಿದೆ,
ಊರ ಊರನು ತಿರುಗಿ ಕೇಳಿದೆ
ಆರ ಕಂಡರು, ' ಮರಿಯ ಕಾಣಿರ ? '
ಎಂದು ಹುಚ್ಚನ ತೆರದೊಳು.

ಮೂರು ದಿನಗಳು ಹುಡುಕಿ ಕೊನೆಗೆ
ಊರ ಮುಂದಿನ ಮನೆಯ ಹೊರಗೆ
ಏರುಬಿಸಿಲೊಳು, ಕುರುಬನೆಡೆಯೊಳು
ಕಂಡೆ ಮಲಗಿದ ಮರಿಯನು.

ಹರುಷ ಮೀರಿತು, ಬಾಲವಾಡಿಸಿ
ಗುರುತುಹಿಡಿಯುತ ನೆಗೆಯೆ ಮರಿಯು ;
ಕುರುಬಗೌಡನ ಗದರಿ ಕೇಳಿದೆ :
' ಕಷ್ಟಯೇತಕೊ ಮರಿಯನು ?

ನಡುಗಿ ಕೈಗಳ ಮುಗಿದು ನಿಂತು
ನುಡಿದನೀಪರಿ ಕುರುಬಗೌಡನು :
‘ ಒಡೆಯ, ಮರಿಯನು ಕದಿಯಲಿಲ್ಲವು ;
ಹಿಂದೆ ಬಂದಿತು ಕರೆಯದೆ.

‘ ಅಂದು ಊರೊಳಗಿರುಳು ತಂಗಿ
ಮುಂದೆ ಪಯಣವ ಬೆಳಸಲೆಂದು
ಮಂದಿ ಮಲಗಿದ ಹೊತ್ತಿನಲ್ಲಿ
ನಿಮ್ಮ ಜಗಲಿಗೆ ಬಂದೆನು.

‘ ಮರಿಯು ಬಗುಳುತಲಡ್ಡಗಟ್ಟಲು,
ತೆರೆದು ಬುತ್ತಿಯ ರೊಟ್ಟಿಯಿಟ್ಟೆನು ;
ಹರುಷದಿಂದಲಿ ತಲೆಯ ತಟ್ಟೆ
ಪ್ರೀಯ ತಡಹಿದೆ ನಾಯಿಯ.

‘ ಚಳಿಗೆ ನಡುಗಲು ಮರುಕದಿಂದ
ಮಲಗೆ ಕಂಬಳಿ ಹಾಸಿ, ಜೊತೆಯೊಳು
ಚೆಲುವು ಮರಿಗೂ ತಾಣವಿತ್ತೆನು.—
ಒಲುಮೆ ಬೆಸೆಯಿತು ಇಬ್ಬರ.

ಮೂಡ ಬೆಳಗಲು ಹೊರಟೆನಂದು.
ಓಡಿ ಹಿಂದೆಯೆ ಬರಲು ಮರಿಯು,
ಕೂಡಲಪ್ಪುತ ಮುತ್ತನಿಟ್ಟು
ಕರೆದು ತಂದೆನು ಊರಿಗೆ.

‘ ಬಂಧುಬಳಗಗಳಿಲ್ಲವೆನಗೆ ;
ಕಂದನೀ ಮರಿ—ಕಳೆಯಲಾರೆ.’
ಎಂದ.—ಗೌಡನ ಕಣ್ಣು ಹನಿತುದು-
ಮರಿಯ ಹಗ್ಗವ ಹಿಡಿಯಲು.

ಹಗ್ಗವೆಳೆದೆನು, ಮರಿಯು ಬಾರದು ;
ಸಗ್ಗದೆನ್ನಯ ಸವಿಯ ನುಡಿಗೆ.
ಹಗ್ಗ ಸಡಿಲಿಸಿ ಬಿಟ್ಟೆನದನು.—
ಕುರುಬ ತಬ್ಬಿದ ಮರಿಯನು.

ವರುಷ ನೂರರ ಕಠಿಣೆ ಬಿಗಿವುದೆ
ಕುರುಬನಿರುಳೊಳು ಬಿಗಿದ ಕಟ್ಟ !
ಮರಿಯ ನಡತೆಗೆ ಕೋಪಗೊಳ್ವುದೆ ?
ಕರುಣೆಯೊಲುಮೆಗೆ ಸಾಟಿಯೆ !

ಒಲಿದರಿರವಿನ ಬಗೆಗಳೆರಡೆ ?
ಒಲುಮೆಗಡ್ಡಲೆ ಕುಲದ ಹೆಮ್ಮೆ ?
ಒಲುಮೆಬೆಸಗೆಯ ಸುಖದ ಸವಿಯನು
ತಿಳಿಯದೇ ಬಡ ಜಂತುವು !

ಕಣ್ಣ ನೀರೊಳು ತೊಳೆದೆನಂದು
ಜನ್ಮದುನ್ನತಿ ಹೆಮ್ಮೆ ಕೊಳೆಯ :
ನನ್ನ ಒಲುಮೆಗೆ ಅಡ್ಡ ಬಂದ,
ಕರುಣೆ ಹಾಯದ, ಬಿಂಕವ.

ಪಿ. ಟಿ. ನರಸಿಂಹಾಚಾರ್.

# ಜಿಂಕೆ

ನಸುಗೆಂಪು ಮೂಡಲಿನ ಕೊನೆಯಂಚ ನಿಲುಕದಿರೆ
ಬನದಿ ತಂಬೆಲರಾಡೆ ಜಿಂಕೆ ನಡುಗಿ
ಬಿರಿವ ಕೆಂದಾವರೆಯ ಮೊಗ್ಗಿನಂದದ ಕಣ್ಣ
ನಸುದೆರೆದು ನಲ್ಮೆಯಲಿ ಹರಿಣಿಯನು ನೋಡಿ
' ಏಳು ಚೆಲ್ವಿನ ಚದುರೆ, ಚಳಿಗಾಳಿ ಬೀಸುತಿದೆ. '
ಎಂದರುಹಿ ಮೇಲೆದ್ದು ಜತೆಗೂಡಿ ನಡೆದು,
ನಡೆ ಬೆಡಗ ಚೆಲ್ಲುತಿರೆ ನೋಟ ಮಿಂಚನು ಬೀರೆ
ಬನದೊಂದು ಚಂದವನು ಮುಂದಾಗಿ ತೋರಿ,
ಗಿರಿಯ ಬಳಿ ನಿಂತು ನಿರ್ಝರಿಯ ನೋಡಿ
ಹರಿಣಿಯೆಡೆಗಿನ್ನೊಮ್ಮೆ ತಿರುಗುತಿರಲು—
ಹಮ್ಮೈಸಿ ನೆಲಕುರುಳಿ ಚೀರಿತಹಹಾ !
ಕಣೆ ನಾಟಿ ಚಿಮ್ಮುತಿದೆ ಬಿಸಿನೆತ್ತರು !

ಎ. ಕೆ. ಪುಟ್ಟರಾಮು

# ವಿಧವೆ

ಮುಂದೆ ಬಾರದಿರೆಂದು ಮನೆಯಿಂದ ಮೈದುನನು
ಹೊರಡಿಸಲು ಗೋಳಿಡುತ ಕಂಬನಿಯು ತಳೆದು
ಚೆಂದದಾಟಕೆ ನಲಿವ ತಂದೆ ಕೈಬಿಡಲಂದು
ಸೊರಗಿ ಬಲು ಕಳವಳಿಸಿ ಕಾಲವನು ಕಳೆದು,
ನೊಂದು ನಾಚುತ ಹೆರರ ಬೇಡಲಾರದೆಯುಡುಗಿ,
ಬಾಲೆ, ದೈನ್ಯದಿ ಕೇರಿಕೇರಿಗಳನಲೆದು,
ಬಂಧುಗಳ ಬಿರುನುಡಿಗೆ ತಲೆಯ ತಗ್ಗಿಸಿ ಕೊರಗಿ,
ಹಾಳುಬಾಳನು ಹಳಿದು ಬಿಸಿಯುಸಿರನೆಳೆದು ;

ತಾಯಿ ಬದುಕಿರುವಾಗ ತಬ್ಬಲಿಯು ನೀನು,
ನಿನ್ನ ಮನೆಯಿರುವಾಗ ಪರದೇಶಿ ನೀನು,
ನಿನ್ನ ಜನ ದೊರೆವಾಗ ಗತಿಹೀನೆ ನೀನು,
ನಾಯುದೆಯೆ ಸತ್ತಂತೆ ಬಾಳುವಳು ನೀನು,

**ಎಲ್. ಗುಂಡಪ್ಪ.**

# ಅಕ್ಕ

ಅಕ್ಕ ನೀನೆಲ್ಲಿರುವೆ ? ಮತ್ತೆಂದು ಬರುವೆ ?
ನಿನ್ನ ನಡೆನುಡಿಗಳನು, ನಿನ್ನ ಮುಖಭಾವವನು,
ನಿನ್ನ ಮೃದುಹಾಸವನು, ಹೃದಯದಾ ಪ್ರೇಮವನು,
ಇನ್ನು ಮರೆಯುವೆನೆಂತು ? ಪಡೆವೆನೆಂತು ?
ಅಕ್ಕ ನಿನ್ನನು ನಾನು ಮರೆವೆನೆಂತು ?

ಅಕ್ಕ ನಿನ್ನನು ನಾನು ಮರೆಯಲಾರೆ.
ಮಠಕೆ ಹೋಗುವ ಮುನ್ನ ತಲೆಬಾಚಿ ಜಡೆಹೆಣೆದು,
ಮೈತೊಳೆದು ಮಡಿಯುಡಿಸಿ, ಮೊಸರನ್ನವನು ಕಲಸಿ,
ತಾಯಿಯೊಡನೆನಗೆ ನೀ ಕೈತುತ್ತುಹಾಕುತಿದ್ದೆ.
ಅಕ್ಕ ನಾನೆಂದದನು ಮರೆಯಲಾರೆ

ಹರುಷದಿಂದಲಿ ನಿನ್ನ ಬಳಿಯೊಳಿದ್ದೆ.
ಮನೆಯ ಮುಂಗಡೆ ಹುಡುಗರೊಡನೆ ಚೆಂಡಾಡುತಿರೆ
ಬಳಲಿದನು ತಮ್ಮನೆಂದೊಡನೆ ತಿಂಡಿಯ ತಂದು—
ಮಗಳಿಗಿಂತಲು ತಮ್ಮ ಮಿಗಿಲೆಂದು—ಕೊಡುತಲಿದ್ದೆ.
ತರಳ ನಾನಂದದನು ತಿಳಿಯದಿದ್ದೆ.

ಕಕ್ಕನೊಬ್ಬನೆ ಬಂದನಂದು ಮನೆಗೆ.
ಹೊರಗೆ ಬಿಸಿಲಿನ ಬೇಗೆ, ಒಳಗೆ ಮನಸಿನ ಬೇಗೆ,
ಸೊರಗಿಸಿತು ಮುದುಕನನು ; ನಡೆನಡೆದು ಕಾಲ್ಸೋತು,
ಕಳೆಗುಂದಿ ಬೆವರ ಹನಿ ಮೊಗದಿಂದಲುರುಳುತಿರೆ,
ಕಕ್ಕ ಬಳಲುತ ಬಂದನಂದು ಮನೆಗೆ.

ದುಗುಡ ಮುತ್ತಿತು ಮನೆಯ ಜನರನೆಲ್ಲ :—
ನಿನ್ನ ಕಡೆಗಾಲದಾ ಕಥೆಯ ಕೇಳಿದರೆಲ್ಲ
ಮನಗರಗಿ ತರತರದಿ ಪೇಚಾಡಿ ಮರುಗಿದರು.
ಇನ್ನೊಂದು ದಿನ ಬಿಡದೆ ಕರೆತಂದೆನೇಕೆಂದು
ಬಗೆಗರಗಿ ಬಿಸುಸುಯ್ದನಪ್ಪನಂದು.

ನಗೆಮೊಗದಿ ನೀನು ಮಲಗಿದ್ದೆಯಂತೆ.
ತಿಂಡಿಯನು ತಿಂದೆಲ್ಲ ಮಾತನಾಡುತಲಿರಲು
ದೊಡ್ಡ ದನಿಯಿಂದೆನ್ನ ಹೆಸರಿಟ್ಟು ಕರೆದೆಯಂತೆ.
ಹತ್ತಿರದಲಿದ್ದವರದೇನೆಂದು ಕೇಳುತಿರೆ
ಮೊಗದಿರುಹಿ ಮೌನವನು ತಾಳ್ದೆಯಂತೆ.

ಕಡೆಗೆ ಕಕ್ಕನೆ ಬಳಿಗೆ ಬಂದನಂತೆ.
ತಮ್ಮನೆಲ್ಲಿ ? ಎನುತ್ತ ಕೇಳಲವನಿಲ್ಲಿಲ್ಲ,
ತವರ್ಮೂರಿಗವ ನಡೆದನೇತಕವನೀಗೆಂದು
ನಿನ್ನ ಕೇಳಿದನಂತೆ. ಅದನರಿತು ಕಳೆಗುಂದಿ
ಕಡುದುಗುಡದಿಂದ ಬಲು ನೊಂದೆಯಂತೆ.

ಒಂದಾಸೆ ನನಗಿದ್ದಿತೆಂದೆಯಂತೆ.
ಕಡೆಗಾಲದಲಿ ತಮ್ಮ ತಂದೀವ ತಣ್ಣೀರ
ಕುಡಿಯಬೇಕೆಂದಿದ್ದನದು ವಿಫಲವಾಯ್ತೆಂದು.
ನಡೆದನೂರಿಗೆ ತಮ್ಮ ಹಾ ! ನಮ್ಮ ಚಿಕ್ಕಪ್ಪ-
ನೊಂದು ದಿನ ಬಿಡದೊಯ್ದನೆಂದೆಯಂತೆ.

ಅದ ಕೇಳಿ ತಣ್ಣೀರ ತಂದರಂತೆ.
ಏತಕದು ? ನನಗೇಕೆ ? ಬೇಡವೆನ್ನುತ ನುಡಿದು
ಕಣ್ಣ ಮುಚ್ಚಿದೆಯಂತೆ ; ಮೇಲುಸಿರ ಬಿಡುತಿದ್ದು
ಥಳಥಳನೆ ಹೊಳೆವವೊಲು ಕೂಡೆ ಕಣ್ಬಿಟ್ಟೆಯಂತೆ.
ಮತ್ತೆ ಕಣ್ಮುಚ್ಚಲೇ ಇಲ್ಲವಂತೆ.

ಅಕ್ಕ ಮನ್ನಿಸು ನನ್ನ ತಪ್ಪನೆಲ್ಲ :
ನೀನೆಂತು ಕೊರಗಿದೆಯೊ ! ಮತ್ತೆಂತು ಮರುಗಿದೆಯೊ !
ನೀರನೊಲ್ಲದೆ ನೀನದೆಂತೆಂತು ಸೊರಗಿದೆಯೊ !
ಈ ತಮ್ಮನನು ನೆನೆದದೆಂತೆಂತು ಮರುಗಿದೆಯೊ !
ಚಿಕ್ಕವನ ನೆನನೆನೆದದೆಂತಳಿದೆಯೊ !

ಮುಂದಾಗುವುದನೆಲ್ಲ ತಿಳಿಯಲಹುದೆ ?
ನೀನಿಂತು ಬಲುಬೇಗ ತನುದೊರೆವೆಯೆಂದಾರು
ತಿಳಿದಿದ್ದರದನು ಚಿಕ್ಕವನು ನಾನೆಂತು
ತಿಳಿಯಲಪ್ಪೆನು ? ನೀನು ಮರೆಯಾಗಲತ್ತತ್ತು
ಇಂದಿಗೂ ಕೊರಗುವೆನು, ನಿನಗರಿಯದೆ ?

ಎಲ್ಲರಳುವರು ನಿನ್ನ ನೆನೆದು ನೆನೆದು.
ಅತ್ತೆಯಳುವಳು, ಭಾವನಳಿದನೆಂದತ್ತತ್ತು ;
ತಾಯಿಯಳುವಳು ; ನಿನ್ನ ಕಡೆಯಾಸೆಯನು ನೆನೆದು
ಅಪ್ಪನಳುವನು ; ನೋಡು, ಅಮ್ಮನಳುತಿಹಳು.
ಎಲ್ಲರಳುವುದು, ಅಕ್ಕ, ಕೇಳಿಸದೆ ನಿನಗೆ ?

ಅಕ್ಕ ನೀನೆಲ್ಲಿರುವೆ ? ಮತ್ತೆಂದು ಬರುವೆ ?
ಯಾವ ಲೋಕದೊಳಿರುವೆ ? ಅಲ್ಲಿ ನೀನೆಂತಿರುವೆ ?
ಇಲ್ಲಿಯವರಲ್ಲಿಹರೆ ? ಭಾವ ನಿನ್ನೊಡನಿಹನೆ ?
ಅಲ್ಲಿ ಬಂದನೆ ಕಕ್ಕ ? ಅಲ್ಲಿಯೂ ದುಗುಡವಿಹುದೆ ?
ಅಕ್ಕ, ನಿನಗಲ್ಲಿಯೂ ಕೊರತೆಯಿಹುದೆ ?

ಏನೆಂಬೆ ? ಕೊರತೆಯನಿತಿಲ್ಲೆಂಬೆಯಾ ?
ಇರಬಹುದು, ಸ್ವರ್ಗದಲಿ ಕುಂದಿಲ್ಲದಿರಬಹುದು ;
ಹರುಷದಿಂದಲಿ ಭಾವ ನಿನ್ನೆಡೆಯೊಳಿರಬಹುದು ;
ದೊರೆವುದೇ ಅಲ್ಲಿ ತಮ್ಮನು ಕೊಡುವ ನೀರು ?
ಏನೆಂಬೆಯಕ್ಕ ? ಮತ್ತೆನ್ನೆಂದು ಬರುವೆ ?

ಎಲ್. ಗುಂಡಪ್ಪ.

# ಬಯಕೆ

ಹುಣ್ಣಿಮೆಯ ರಾತ್ರಿಯಲಿ ಬಿಳಿಮುಗಿಲು ಗಗನದಲಿ
ಸಾಲುಗೂಡುವ ಮತ್ತೆ ಚೆದರುವಾಟ ;
ಕಣ್ಣು ತಣಿವಷ್ಟೊಂದು ನೀರು ಬೆಳಗುವ ಹೊಳೆಯು ;
ಹಾಲು ಚೆಲ್ಲಿದ ಹಾಗೆ ಬೆಳುದಿಂಗಳು ;
ತೊರೆಯೊಂದು ದಡದಲ್ಲಿ ಹರಡಿರುವ ಮಳಲೊಟ್ಟು,
ಮತ್ತೊಂದರಲಿ ಗುಂಪುಮರದ ನೆಳಲು ;
ಹೊರಟು ನೀರಿನ ಮೇಲೆ ಸರಿದು ಸಾಗುವ ದೋಣಿ ;
ಎತ್ತಲೂ ನಿರ್ಜನತೆ, ನಿಶ್ಶಬ್ದತೆ ;
ಎತ್ತ ನೋಡಿದರತ್ತ ನದಿಯ ತಿಳಿನೀರೆದ್ದು
ಸಣ್ಣ ಸಣ್ಣಲೆಯಾಗಿ ಕುಣಿವ ಬೆಡಗು ;
ಒತ್ತಿ ದೋಣಿಗೆ ಬಡಿದು ಕೈನೀಡಿದರೆ ಸೋಕಿ
ನುಣ್ಣನಪ್ಪುತ ನೀರು ತೋರುವಿಂಪು ;
ತುಂಬಿದಿಂದುವಿನ ನಗೆ ಹೊರಸೂಸಿ ಪಾಲಾಗಿ
ತೆರೆತೆರೆಗೆ ಹರಡಿಕೊಂಡಿರುವ ಸೊಗಸು ;
—ಇಂಬಾದ ನೋಟದೊಳಗುಕ್ಕುವಾನಂದವನು
ತೆರೆದ ಹೃದಯವು ನಲಿದು ಹೀರುತಿರಲು,
ಅಲ್ಲಿ ಕುಳಿತೊಬ್ಬನೇ, ಕಟ್ಟುನಿಟ್ಟಿಲ್ಲದೆಯೆ
ತೇಲುವುದಕೆಡೆಗೊಟ್ಟು ಹರಿಗೋಲಿಗೆ,
ಎಲ್ಲಿ ಹೋಗುವೆ ನಾನು, ಯಾರು ಕರೆಯುವರೆನ್ನು-
ತಾಲಿಸದೆ ಚಿಂತಿಸದೆ ಹಂಬಲಿಸದೆ,

ಶಾಂತಿಯುಡಿಗೆಯನುಟ್ಟು ಪ್ರಕೃತಿಯೊಲವನು ತೋರಿ
ತನ್ನ ಮಡಿಲಲಿ ನನ್ನನಿಟ್ಟು ತೂಗಿ
ಸಂತೋಷದಿಂದುಲಿಯುವಾನಂದಗಾನದಲಿ
ನನ್ನ ಮೈಯನು ಮರೆಯುವೊಂದೆ ಬಯಕೆ.

ತೀ. ನಂ. ಶ್ರೀಕಂಠಯ್ಯ.

# ತೊರೆ

ಕರಗಿ ಸುರಿದುದು ಮುಗಿಲು,
ನೊರೆದು ಹರಿದುದು ತೊರೆಯು,
ಬಿರುಗಾಳಿ ಬಾನಿನೊಳು ಭೋರ್ಗರೆದುದು.
ಅರೆತಾಸು ಸರಿದಿಲ್ಲ :
ಬರಿನೀಲದಾಗಸದಿ
ಕರಿಮುಗಿಲು, ಕುಡಿಮಿಂಚು, ಸಿಡಿಲು, ಗುಡುಗು !

ನಿಲುಕದೆನ್ನಯ ಮನಕೆ
ಮಳೆಬೆಳಕುಗಳ ಗುಟ್ಟು ;
ಸಿಲುಕಿ ಬಳಲುತ ನಾನು ಯೋಚನೆಯೊಳು
ಕುಳಿತಿರಲು ಸುಖವಳಿದು,—
ಮಳೆ ನಿಂದು ತೊರೆ ಕರೆಯೆ,
ಕೆಳೆತನವನದರೊಡನೆ ಬೆಳಸೆ ಹೊರಟೆ.

ತಲೆ ಮೇಲೆ ತಿಳಿಬಾನು,
ನಳನಳಿಪ ಬಿಳಿಮುಗಿಲು ;
ಬೆಳಕಿನೊಳು ನಗುತಿಹುದು ನನೆದ ಗರುಕೆ ;
ಇಳೆಯ ಬೆಡಗಿಗೆ ಗಾಳಿ-
ಯೊಲಿದುಳಿಯುತುಬ್ಬರವ
ಹೊಳೆಯುವೆಲೆಹೂಗಳೊಡನಾಡುತಿಹುದು

ಮಲೆ ಮೇಲೆ, ಬನದೊಳಗೆ,
ನಲಿದು ಮಿರುಗಿದುವೆಲೆಗ-
ಳೊಲುಮೆ ಸೂಸುವ ಹಾಡ ಹರಡಿತೆಲರು.
ಚೆಲುವ ಕಂಡುಬ್ಬಿದೆನು :
ಮಳೆಯ ನೀರೊಳು ತೊಯ್ದು
ಬೆಳಕಿನೊಳು ನಗುತಲಿಳೆ ಎಷ್ಟು ಚೆಲುವೆ !

ಇನನೊಲುಮೆ ನಲವೀಯೆ
ನೆನೆದ ಕಂಗಳೊಳುಕ್ಕಿ
ಮಿನುಗೆ ನಗೆ, ಸಿರಿಮೊಗದ ಮುಗುದೆ ಚೆಲುವೋ,
ಇನನ ಬೆಳಕೊಳು ಹೊಳೆವ
ನೆನೆದ ನಾಡಿದು ಚೆಲುವೊ ?
ಎನುತಲಚ್ಚರಿಗೊಳುತ ಸರಿದೆ ತೊರೆಗೆ.

ತೊರೆಯು ತೆರೆಗಳಡೇನ
ನರೆಮುರಳಿಗುಸಿರುವುದು ?
ತೊರೆಗೇತಕವಸರವು ? ಎಲ್ಲಿಗೋಟ ?
' ತೊರೆ, ನಿಲ್ಲು, ಎನಗರುಹು :
ಇರುಳು ಪಗಲೆನ್ನದೆಯೆ
ಹರಿದು ಕಲ್ಗಳ ಮೇಲೆ
ಕೊರಗದೆಯೆ ನಗುತಿರುವೆಯೆಂತು ? ಪೇಳು.

‘ ಅಲರುಗಳ ಕಂಪೊಗೆದು,
ಎಲರು ಸರಸದಿ ಬೀಸಿ,
ಅಲೆಗಳೊಡನಾಡಿ ಮುತ್ತಿಡಲು ನಗುವೆ ;
ನಿಲ್ಲು ತೊರೆ, ಎನಗರುಹು :
ಕಾಳಮುಗಿಲುಗಳೊಡನೆ
ಸುಳಿದಾಡಿ ಭೋರ್ಗರೆವ
ಗಾಳಿಯುಬ್ಬರದೊಳೂ ನಗುವೆಯೆಂತು ?

‘ ತರು ಪೊಸದು ತಳಿರುಟ್ಟು,
ಇರವ ನಿನ್ನೊಳು ಕಂಡು,
ಶಿರವ ತೂಗುತ ತೋರೆ ಮೆಚ್ಚಿಕೆಯನು,
ನೀ ನಗುವುದಚ್ಚರಿಯೆ !
ಪರಭೃತದ ದನಿ ಬಿಗಿದು
ಬರಿವೈಯ ತರು ಸಿಂದು
ಕೊರಗುವಾ ಮಾಗಿಯೊಳು ನಗುವೆಯೆಂತು ?

‘ ತೊರೆ ಗುಟ್ಟನೇನನ್ನು
ಅರೆಮರಳಿಗುಸಿರುವುದು ?
ತೊರೆ, ನಿನ್ನ ನೆಲೆಯೆಲ್ಲಿ, ಎಲ್ಲಿಗೋಟ ?
ಇರುಳೊಳಗೆ ಚಂದಿರನು
ತಾರೆ ಬಳಗವ ಕೂಡಿ
ತೆರೆ ಮೇಲೆ ಕುಣಿಯೆಬರೆ,
ತೊರೆ, ಅವರಿಗೇನೊರೆವೆ ? ಕೆಳೆಯುಗರುಹು.’

ನಾನರಿಯೆ ತೊರೆಗುಟ್ಟ-
ನೆನಗದಕೆ ಸಂತಸವು
ಮನದಣಿಯ ಕೇಳಲಾ ಪಿಸುಮಾತನು.
ಇನನಿಳಿಯೆ ಸಂಜೆಯೊಳು,
ಬನ ನಲಿಯೆ ಗಾನದೊಳು,
ಎನಗೆ ತೊರೆ ಬಳಿ ತಾಣ—
ಮನಗಾಣ್ಬೆನೊಂದು ದಿನ ತೊರೆಯ ಗುಟ್ಟ.

ಪಿ. ಟಿ. ನರಸಿಂಹಾಚಾರ್.

# ಮಲೆನಾಡ ಹುಡುಗಿ

ನೋಡವಳ ! ತಾನೊಬ್ಬಳಿಹಳು ಗದ್ದೆಯಲಿ,
ಅಲ್ಲಿ. ದೂರದಲೊಂಟಿ ಮಲೆನಾಡ ಹುಡುಗಿ !
ಕೊಯ್ಯುತ್ತ, ಹಾಡುವಳು ತನ್ನಲ್ಲಿ ತಾನು ;
ನಿಲ್ಲಿಲ್ಲಿ, ಅಲ್ಲದಿರೆ ಮೆಲುನಡೆಯಿನೈದು !
ಒಬ್ಬಳೇ ತೆನೆಗಳನು ಕೊಯ್ದು ಕಟ್ಟುವಳು,
ಮನವ ಕರಗಿಪ ಹಾಡನೊಂದ ಹಾಡುವಳು ;
ಆಲಿಸಾಲಿಸು ! ನೋಡು, ಹಾಡಿನಿನಿದನಿಯು
ತುಂಬಿ ಕಣಿವೆಯನೆಲ್ಲ ಹೊರಸೂಸುತಿಹುದು.

ಅರಬದೇಶದ ಮರಳಿನಲ್ಲಿ ದಾರಿಗರು
ಸೊರಗಿ ಸುತ್ತುತ ನೆರಳ ಸೇರಿ ಕುಳಿತಾಗ
ಆಲಿಸುವ ಸವಿಗೊರಳ ಹಕ್ಕಿಯಿಂಚರವ
ಬಾಲೆ ಮುಂಚಿದಳು ಮಂಜುಳಗಾನದಿಂದ :
ಸಾಗರದ ಶಾಂತತೆಯ ಭೇದಿಸುತ ಬಂದು
ಮಂಜು ಮನೆಮಾಡಿದಾ ದ್ವೀಪದಲಿ ನಿಂದು
ಕೋಗಿಲೆ ವಸಂತದಲಿ ಹಾಡುತಿರಲಿಂತು
ಸೋಜಿಗದ ಮಾಧುರ್ಯ ತೋರುವುದದೆಂತು ?
ಆವಳೇನ ಹಾಡುವಳು ? ಹೇಳುವವರಾರು ?
ದುಗುಡವನು ಸೂಸುವಾ ನುಡಿಯೊರೆವುದೇನು ?

ಹಳೆಯ ದುಃಖದ, ಕಳೆದುಹೋದ ಸುದ್ದಿಗಳು,
ಹಿಂದೆ ಹಿಂದಿನ ಯುದ್ಧವಾರ್ತೆಯಿರಬಹುದು.
ಇಲ್ಲವಾದರೆ ನಾಡ ಜನರಾಡುತಿರುವ
ಎಲ್ಲರನುಭವದ ಸಂಗತಿಯ ಕಥೆಯಹುದು—
ಹಿಂದಾಗಿ, ಮುಂದೆ ಮತ್ತಾಗಬಹುದಾದ
ದುಃಖವೋ ನಷ್ಟವೋ ಸಂಕಟವೊ ಏನೋ ?

ಏನಾದರೇನು ? ಮಲೆನಾಡಿನಾ ಹುಡುಗಿ
ಹಾಡಿದಳು ಹಾಡು ಕೊನೆಗಾಣದೆಂದೆನಲು ;
ಕಂಡೆ ಕೆಲಸದೊಳವಳು ಬಿಡದೆ ಹಾಡಿದುದ,
ಕಂಡೆ ಕೈಗುಡುಗೋಲ ಹಿಡಿದು ಬಗ್ಗಿದುದ.
ಅಲುಗದೆಯೆ ನಿಂತಲ್ಲೆ ನಿಂತು ಕೇಳಿದೆನು ;
ನಲವಿಂದ ಕಳೆಗೂಡಿ ಬೋರೆಯೇರಿದೆನು.
ನೆಲಸಿತಾ ಗಾನದಿನಿದನಿಯು ಮನದೊಳಗೆ,
ನಿಲುಕದಂತಾದರೂ ನನ್ನ ಕಿವಿಗಳಿಗೆ.

ಎಲ್. ಗುಂಡಪ್ಪ.

# ಎರಡು ದಾರಿ

ಬಂದು ನಿಂತೆನು ಬಾಳಿನಡವಿಗೆ ;
ಮುಂದುಗಡೆ ಕವಲೊಡೆದ ಹಾದಿ :
    ಯಾವ ಸೀಳನು ಹಿಡಿಯಲಿ ?
ಇತ್ತ ನಡೆಯಲೊ, ಅತ್ತ ನಡೆಯಲೊ,
ಎತ್ತಲೂ ಕೈಮರವೆ ಕಾಣದು ;
    ದೇವರೊಬ್ಬನೆ ಬಲ್ಲನು !

ದೂರ ಹರಿಯದು ನಣ್ನ ನೋಟವು ;
ಯಾರು ಕಂಡರು : ಎಲ್ಲಿ ಹಳ್ಳವೊ,
    ಎಲ್ಲಿ ಪೆಡಸಿನ ನಡಿಗೆಯೊ ?
ಕಡೆಗೆ ಹಾಯುವ ದಾರಿ ಯಾವುದೊ ?
ಕೆಡಕು ನುಂಗುವ ದಾರಿ ಯಾವುದೊ ?
    ಬಲ್ಲೆನೇ ಈ ಗುಟ್ಟನು !

ಒಮ್ಮೆ, ಇದು ಸುಖವೆಂದು ಬಗೆವೆನು,
ಸುಮ್ಮನಿದರಲೆ ನಡೆವೆನೆನುವೆನು ;
    ಮನಸು ಹೊರಳುವುದೊಡನೆಯೆ.
ಮಬ್ಬುಮಬ್ಬಾಗಿದಿರೊಳಿರುವುದು
ಹೆಬ್ಬುಲಿಯೊ ಎಂದಳುಕಿ ಚಿಂತಿಸಿ
    ಕೊನೆಗೆ ಹಿಂದೆಯೆ ನಿಲುವೆನು,

ಜೊತೆಗೆ ನಡೆಯುವವರೊಬ್ಬರಿಲ್ಲ,
ಹಿತದ ಕೆಳೆಯರು ಹಿಂದಕುಳಿದರು ;
ನನ್ನ ಹಾಗೆಯೆ ಕುರುಡರು !
ನುಗ್ಗಿ ಹೋಗುವ ಧೈರ್ಯವಿಲ್ಲ,
ಕುಗ್ಗಿ ಕುಸಿಯಿತು ಹೃದಯವೆಲ್ಲ
ತನ್ನ ಹೊರೆಯನು ತಾಳದೆ.

ತೀ. ನಂ. ಶ್ರೀಕಂಠಯ್ಯ.

# ಬಿಡುಗಡೆ

ಬಂಧನವ ಬಿಡಿಸಯ್ಯಾ ಕರುಣಾಳು ದೇವ
ಸಂದಿಗ್ಧಸಮಯದಲಿ ಮರೆಯಾಗಬೇಡ ॥ ಪ ॥

ಲೋಕಗಳ ಸೃಜಿಸುವೆನು ತಂಬೆಲರನೂದುವೆನು
ಸಾಕಿ ಸಲಹುವೆನು ಮಿಗವಕ್ಕಿಗಳನು
ಬೇಕಾಗಿ ಸಿಲುಕಿಹೆನು ಬಲೆಯೊಳಗೆ ನಾನೀಗ
ಸಾಕಿನ್ನು ಬಿಡುಗಡೆಯು ಸಲ್ಲದೆನದೆ

ವಿಶ್ವಕಧಿಪತಿಯಾಗಿ ಪೊತ್ತಿಹೆನು ಭಾರವನು
ನಶ್ವರನು ಆಗದೆಯೆ ನೋಡ ಮನುಜ
ನಶ್ವರನು ನೀನಹುದು ಸೆರೆ ಬೇಗ ಸವೆಯುವುದು
ವಿಶ್ವಾಸವಿರಬೇಕು ಎನದೆ ಮನದೆ

ಸೊಗಸಿನೋಲಗಸಾಲೆ ಮಳೆಬಿಲ್ಲ ಕೋಟೆಯಲಿ
ಜಗದ ನಾರೀನಯನಕಾಂತಿಯಲ್ಲಿ
ಮುಗುಳ ಬಂಡುಣಿಯಂತೆ ಕಂಪಿನೊಳು ಸುಖಿಸುವೆನು
ಸೊಗಬಡದೆ ಹಂಬಲಿಪೆ ಮುಕುತಿಗೆನದೆ

**ಡಿ. ಎಲ್. ನರಸಿಂಹಾಚಾರ್.**

# ದೇವನ ಹರಿಕಾರರು

(೧)

ಇಂತು ದೇವನು ಹೇಳುವನು ತನ್ನವರಿಗೆ :
' ಕೆಳಗೆ ಕೆರಳಿದ ಬೇಗೆ ಕಾಣುವುದೆ ನಿಮಗೆ ?
ಹುಟ್ಟುತಲೆ ಕಲಹವನು ಕಲಿತ ನರರು !
ಎಷ್ಟೊಂದು ದಿನವವರು ನರಳಲೆಡೆಗೊಟ್ಟು
ನೋಡಿದೆವು ! ಮೊದಲೇಳಿ, ನೀನಿನ್ನು ಹೋಗಿ,
ಧರಣಿಯಲಿ ನನ್ನ ಶಾಂತಿಯನು ಸಾರಿ.'

ಹಿಗ್ಗುತೇಳುವರವನು ಕರೆಯುವುದಕವರು,
ಹಿಗ್ಗುತವನಪ್ಪಣೆಯನೊಪ್ಪಿ ಕೇಳುವರು,
ಹಿಗ್ಗುತ್ತಲಿಳಿಯುವರು ಬಯಲುನೆಲಕೆ.
—ಅಯ್ಯೊ, ಆ ಮನವೊಪ್ಪಿ ಹೊರಟ ಚಾರರಲಿ,
ಅಷ್ಟು ಜನದಲಿ, ಮಂದಿಯೆಷ್ಟೊಂದು ಕಡಮೆ
ತಿರುಗಿ ದಣಿಯಿದಿರಿನಲಿ ನಿಲ್ಲುವವರು !

ಕೆಲವರಾ ತುಮುಲದಲಿ ತಪ್ಪಿ ಹೋಗುವರು ;
ಮುಂದುಗಾಣದೆ ಬೆದರಿ ಚೆದರಿ ತೊಳಲುವರು.
ಸೆರೆಯ ಮನೆಯಲಿ ಕೆಲವರುಸಿರೆಳೆವರು
ತಾಗುವುದು ಸಗ್ಗದೆಯೆ ಬರುವ ಕೆಲವರನು,
(ದಿನದಲರ್ಧವು ಕೂಡ ಕಳೆಯದಿರುವಲ್ಲಿ,)
ನಿಷ್ಕರುಣಿ ಮೃತ್ಯುವಿನ ಸರಳು ನಡುವೆ.

ಕಡೆಗೆ, ಕಡೆಗೆಲ್ಲಿಯೋ ಒಬ್ಬನಿರಬಹುದೆ ?
ಕಳೆಗೂಡಿ ಹೊಳೆವ ಮುಖಭಾವದಲಿ ತಾನು
ದಿನದ ಕೊನೆಯಲಿ ಹೊರಟು ಬಯಲಿನಿಂದ,
ತನ್ನೊಡೆಯನಾಜ್ಞೆಯನು ಚೆನ್ನಾಗಿ ನಡೆಸಿ,
ಕ್ಷೇಮದಿಂದಾ ರಣದ ಧೂಳಿನಲಿ ತೂರಿ,
ಹಿಂದಿರುಗಿ ಸೇರುವನು ದಣಿಯ ಬಳಿಗೆ.

ತೀ. ನಂ. ಶ್ರೀಕಂಠಯ್ಯ.

(೨)

ಧರೆಯ ಸಂಕಟದಿರವ ಕಂಡಿರ ?
ನರರ ಕಡಿದಾಟವನು ಕಂಡಿರ ?
ಬರಿದೆ ಬಹುದಿನ ಬಳಲುತಳುವರ ಗೋಳ ಕೇಳಿದಿರ ?
ಭರದಿನೇಳಿರಿ, ಧರೆಗೆ ನಡೆಯಿರಿ,
ಹರಡಿ ಶಾಂತಿಯನೆಂದು ಜಗದೀ-
ಶ್ವರನು ನಿಜಭಕ್ತರನು ಕರೆದಾಜ್ಞಾಪಿಸಿದನೊಲಿದು.

ಹರುಷದಿಂದಪ್ಪಣೆಯನಾಲಿಸಿ,
ಹರುಷದಿಂದ ಹಸಾದವೆಂದರು,
ಹರುಷದಿಂದದ ಪಾಲಿಸಲು ನೆಲಕಿಳಿದರವರಂದು.
ಹರಹರಾ ! ಹಿತದಿಂದ ಬಂದಾ
ಪರಮನನುಚರರೊಳಗೆ ನಾಕಕೆ
ಮರಳಿದರೆ ಬಹುಜನರು ? ನಿಂದರೆ ದೇವನಿದಿರಿನಲಿ ?

ಕೆಲರು ಗಲಭೆಗೆ ಸಿಕ್ಕಿ, ಬುದ್ಧಿಯ
ಕಳೆದುಕೊಂಡನುಸರಿಪ ಮಾರ್ಗವ
ತಿಳಿಯದಲೆದರು, ಕೆಲರು ಸೆರೆಮನೆಯೊಳಗೆ ಕೊರಗಿದರು.
ಕೆಲರು ನಿರ್ದಯ ಮೃತ್ಯು ಬೀಸಿದ
ಬಲೆಗೆ ಬೀಳುತ ಸೋತು ಸೊರಗಿದ
ರಲಘುಯಾತನೆಗಳಲಿ, ದಿವಸದ ಮಧ್ಯಭಾಗದಲಿ.

ಒಡೆಯನೊಪ್ಪುವ ತೆರದಿ ಕಾರ್ಯವ
ಬಿಡದೆ ಮಾಡುತ, ಕಷ್ಟದಿಂದೆದೆ-
ಗೆಡದೆ ನಡೆಯುತ ಮುಂದೆ, ವಿಜಯವ ಪಡೆದು ನಲಿಯುತ್ತ,
ಒಡನೆ ಭೂಮಿಯ ಬಿಡುತ ನಾಕವ
ನಡರಿ, ಹರ್ಷೋತ್ಕರ್ಷದಿಂ ಜಗ
ದೊಡೆಯನೆಡೆಗೈದಿದವನೊಬ್ಬನೆ ; ಕಾಣೆ ಹಲವರನು.

ಎಲ್. ಗುಂಡಪ್ಪ.

## ಜೀವನ

ಜೀವನವಿದೇನು ಹರಿಯೇ
ಆವುದಾದಿಯು ಇದಕೆ ಆವುದಂತವು ಇದಕೆ ॥ ಪ ॥

ಮೂಡಲಲಿ ನೇಸರನು ನಗುಗೆಂಪಿನೊಳು ಮೂಡೆ
ನಾಡೆ ದನಿಗೈದು ಗರಿಗೆದರಿ ಹೊರಟು
ಪಾಡುತ್ತಲಲೆದಾಡಿ ಗೂಡಿಂಗೆ ಸಂಜೆಯಲಿ
ಕೂಡಿಬಹ ಪಕ್ಕಿಗಳ ಬಳಗದಂತೆ

ಗಿರಿಗಳೊಳು ಸಂಚರಿಸಿ ನೀರಿನಲೆಗಳ ಸೇರಿ
ಪರಿಪರಿಯ ಕುಸುಮಗಳ ಕಂಪನಾಂತು
ಮೊರೆಮೊರೆದು ಗಿಡಗಳಲಿ ಸರಿಸರಿದು ಸರಿಯುತಲಿ
ಮರಳಿಬಹ ಗಾಳಿಗಳ ಗಮನದಂತೆ

ಕಾನನದಿ ಕುಟಜಗಳ ವದನವನು ತೆರೆಯುತ್ತೆ
ಮೌನದಿಂ ಪಸರಿಸುವ ಸುರಭಿಯಂತೆ
ಸಾನುವಿನ ಗೈರಿಕದ ವರ್ಣಗಳು ಸೇರುತ್ತ-
ಲೇನಾನುವೊಂದನೊಡಗೂಡುವಂತೆ

ಬಿಸಿಲ ಬೇಗೆಗೆ ಬಳಲಿ ಆಗಸಕೆ ಮೊಗದಿರುಹಿ
ಸಸಿಗಳನು ಸಂತೈಸಲಾಗದಿರಲು
ಹಸಿದು ಬಾಯಾರಿ ವರ್ಷಾಗಮದ ಮೋಡಗಳ
ಬಿಸಿಯಲಾಶಿಸುವ ಭೂದೇವಿಯಂತೆ

ದಿನದಿನವು ಜನಿಸುತ್ತ ದಿನದಿನವು ಸಾಯುತ್ತ
ಮನಕೆ ಶಾಂತತೆಯು ಬಲುದೂರವಾಗೆ
ಅನುದಿನವು ವಿಶ್ವಸೇವೆಯಲಿನಿತನಾರ್ಜಿಸ-
ಲ್ಕಿನನು ಬೆಳಸುವ ನಿಚ್ಚ ಪಯಣದಂತೆ

ಮಿಸುನಿಬಂಧನಮಿದುವೆ ದುಗುಡದಾಗರಮಿದುವೆ
ಪುಸಿಯುಪ್ಪ ಮಾಳ್ಕೆಗಳ ಜಾಲಮಿದುವೆ
ಪೊಸತಪ್ಪ ಮೋಹಗಳ ರಂಗಮಿದು ಜನ್ಮಮಿದು
ನಸುಸೊಗವ ಜೀವನಕೆ ತೋರೊ ದೇವಾ

ಡಿ. ಎಲ್. ನರಸಿಂಹಾಚಾರ್.

## ಆತ್ಮನಿವೇದನ

‘ ಬೃಂದಾವನಕೆ ಹಾಲನು ಮಾರಲು
ಹೋಗುವ ಬಾರೇ ಬೇಗ, ಸಖಿ ! ’
‘ ಬೃಂದಾವನದಿ ಹಾಲನು ಕೊಳ್ಳುವ-
ರಾರಿಹರೇ ಹೇಳಿಂದುಮುಖಿ ? ’

‘ ಗೋವನು ಕಾಯುವ ಗೋವಿಂದನಿಹನೇ,
ಹಾಲನು ಕೊಳ್ಳುವ, ಕೇಳೆ ಸಖಿ !
ಚಿನ್ನವ ಕೊಡನೇ, ರನ್ನವ ಕೊಡನೇ,
ತನ್ನನೆ ಕೊಡುವನು ಬಾರೆ, ಸಖಿ !

ಕಣ್ಣನು ಮೋಹಿಪ ಪೀತಾಂಬರವನು,
ಬಣ್ಣದ ಬಳೆಗಳ ಧರಿಸು, ಸಖಿ ;
ಚೆನ್ನನ ಮೋಹಿಸುವೆದೆಯನು ಹಾರವು
ಸಿಂಗರಿಸಲಿ, ಹೇ ನಳಿನಮುಖಿ !

‘ ಝುಣಝುಣವೆನ್ನಲಿ ನೂಪುರ, ಗೋಪಿ,
ಹಣೆಯೊಳು ಚಂದನ ರಂಜಿಸಲಿ !
ತೊಂಡೆಯ ಹಣ್ಣನು ತುಟಿಗಳು ನಗಲಿ,
ವದನವು ಮಿಾರಲಿ ತಾವರೆಯ !

ಯಮುನಾತೀರದೊಳಲೆಯುವ ಬಾರೇ
ಹಾಲು ಬೇಕೆ ಹಾಲೆಂದು ಸಖಿ,

ಹಾಲನು ಮಾರುವ ನೆವದಿಂದ ಹರಿಯು
ಮೋಹಿಸಿ ಕರೆಯುವ ಬಾರೆ, ಸಖಿ !

'ಹಾಲ ನಿವೇದಿಸಿ ಆತ್ಮವನರ್ಪಿಸಿ
ಮುಕ್ತಿಯ ಹೊಂದುವ, ಸೌಮ್ಯಮುಖಿ !
ಹಾಲನು ಮಾರಿ ಹರಿಯನು ಕೊಳ್ಳುವ
ನಾವೇ ಧನ್ಯರು, ಕಮಲಮುಖಿ !

'ನಮ್ಮಾ ಲಾಭವ ವಿಚಾರುವ ಲಾಭವು
ಬೇರಿನ್ನಿಹುದೇ ? ಇಂದುಮುಖಿ !
ಬೃಂದಾವನಕೆ ಹಾಲನು ಮಾರಲು
ಹೋಗುವ ಬಾರೇ ಬೇಗ, ಸಖಿ !

ಕೆ. ವಿ. ಪುಟ್ಟಪ್ಪ.

# ಮೊದಲ ಚರಣಗಳ ಸೂಚಿಕೆ


| | | | | ಪುಟ |
|---|---|---|---|---|
| ಅಕ್ಕ ನೀನೆಲ್ಲಿರುವೆ ? ಮತ್ತೆಂದು ಬರುವೆ ? | | | .. | ೭೫ |
| ಅಪ್ಪನ ಜೇಬಿನ ದುಡ್ಡುಗಳೆಲ್ಲ | .. | .. | .. | ೨೪ |
| ಇಂತು ದೇವನು ಹೇಳುವನು ತನ್ನವರಿಗೆ : | | | .. | ೯೦ |
| ಇಂದ್ರನ ಪುರದಲಿ ನೆಲಸಿದ ಹೂವೆ, | | .. | .. | ೧೫ |
| ಎಲರಿಲ್ಲ ಬಾನಲ್ಲಿ, | .. | .. | .. | ೬೦ |
| ಏನಿದೇನನ್ಯಾಯ ಸದ್ಧರ್ಮಮೂರ್ತಿ ? | | .. | .. | ೬೪ |
| ಏನು, ಉಸಿರಾಡುವಸೆ ಕಲ್ಲೆದೆಯ ನರನು : | | | .. | ೫೪ |
| ಕರಗಿ ಸುರಿದುದು ಮುಗಿಲು, | .. | .. | .. | ೮೧ |
| ಕರಿಯ ಮುಗಿಲಿನಿದಿರಿನಲ್ಲಿ | .. | .. | .. | ೪ |
| ಜೀವನವಿದೇನು ಹರಿಯೋ | .. | .. | .. | ೯೩ |
| ಟುವ್ವಿ ! ಟುವ್ವಿ ! ಟುವ್ವಿ ! ಟುವ್ವಿ ! | | .. | .. | ೨ |
| ತಾಯಿ ದೇವರೆಂದು ವೇದ | .. | .. | .. | ೫೦ |
| ತುಂಗಾತೀರದ ಬಲಗಡೆಯಲ್ಲಿ | .. | .. | .. | ೩೯ |
| ದೇವರ ಪೆಪ್ಪರಮೆಂಟೇನಮ್ಮಾ | .. | .. | .. | ೨೨ |
| ಧರೆಯ ಸಂಕಟದಿರವ ಕಂಡಿರ ? | | .. | .. | ೯೧ |
| ನಸುಗೆಂಪು ಮೂಡಲಿನ ಕೊನೆಯಂಚ ನಿಲುಕದಿರೆ | | | .. | ೨೩ |
| ನಾನೇಕೆ ಕೊರಗುವೆನು, | .. | .. | .. | ೯ |

ಪುಟ


ನೋಡವಳ ! ತಾನೊಬ್ಬಳಿಹಳು ಗದ್ದೆಯಲಿ .. ೮೫

ಬಂದು ನಿಂತೆನು ಬಾಳಿನಡವಿಗೆ ; .. .. ೮೭

ಬಂಧನವ ಬಿಡಿಸಯ್ಯ ಕರುಣಾಳು ದೇವ .. .. ೮೯

' ಬೃಂದಾವನಕೆ ಹಾಲನು ಮಾರಲು .. .. ೯೫

ಮನದಿ ಬೇಸರಗೊಂಡು ನಿನ್ನೆಡೆಗೆ ಬಂದಿಹೆನು .. ೧೯

ಮಾಡಲು ಏನೂ ಕೆಲಸವೆ ಇಲ್ಲ ; .. .. ೧೧

ಮುಂದೆ ಬಾರದಿರೆಂದು ಮನೆಯಿಂದ ನೈದುನನು .. ೭೪

ಲತೆಯೆ ಹೂಗಳ ತೋರು ; .. .. .. ೭

ವಿಜಯನಗರಕೆ ಮುನ್ನ ಹಿರಿಯ ಕನ್ನಡನಾಡ .. ೫೫

ಸಂಪಗೆಹೂವನು ಸಂಪಗೆಹೂವೆಂ .. .. ೩೩

ಸದ್ದು ಇಲ್ಲದಿರುಳಿನಲ್ಲಿ .. .. .. ೫೬

ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ .. ೧

ಹುಣ್ಣಿಮೆಯ ರಾತ್ರಿಯಲಿ ಬಿಳಿಮುಗಿಲು ಗಗನದಲಿ .. ೭೯

ಹೆರರ ನೋವಿಗೆ ' ಅಯ್ಯೋ ' ಎಂದು .. .. ೬೮

ಸರ್ವಾಧಿಕಾರಗಳು

ಪ್ರೋಗ್ರೆಸ್ [illegible]ಕ್ ಸ್ಟಾಲ್,

ಮೈಸೂರು.